


# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

SK NEWS ಕನ್ನಡ

Volume : 07 Issue : 64 Wednesday 13-11-2024 E-mail : maruti.b.hosamani76@gmail.com Page: 4 Price : Rs. 1/-


## ಎಲ್ಲಾ ಮಹನೀಯರ ಜಯಂತಿಗಳು ಅರ್ಥ ಪೂರ್ಣವಾಗಿ ಆಚರಿಸಲಾಗುವುದು

**ಸಿಹಿ ಕಹಿ ಸುದ್ದಿ**

**ಕೂಡ್ಲಿಗಿ :** ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕ ಆಡಳಿತ ಕಚೇರಿಯಲ್ಲಿ ಆಚರಿಸಿದ ವನಕೆ ಓಬವ್ವನ ಜಯಂತಿಯ ಕುರಿತು ಎಲ್ಲಾ ಮಹಾತ್ಮರ ಜಯಂತಿಗಳನ್ನು ಅರ್ಥ ಪೂರ್ಣವಾಗಿ ಆಚರಿಸಲಾಗುವುದು ಎಂದು ಶಾಸಕ ಡಾ, ಎನ್.ಟಿ. ಶ್ರೀನಿವಾಸ್ ಹೇಳಿದರು. ಪಟ್ಟಣದ ತಾಲೂಕ ಆಡಳಿತ ಭವನದಲ್ಲಿ ವೀರವನಿತೆ ಒನಕೆ ಓಬವ್ವ ಇವರ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಮಹನೀಯರುಗಳ ಜಯಂತಿಗಳನ್ನು ತಾಲೂಕ ಆಡಳಿತದಿಂದ ಅರ್ಥ ಪೂರ್ಣವಾಗಿ ಆಚರಿಸಲು ನಿಮ್ಮೆಲ್ಲರ ತಾಳ್ಮೆ, ಸಹಕಾರದ ಅಗತ್ಯವಿದೆ. ನಾಡಿಗಾಗಿ ಶೌರ್ಯ ಮೆರೆದು, ಛಲ ಬಿಡದೆ ಹೋರಾಡಿದ ಛಲವಾದಿ ಮಹಿಳೆ ಕೇವಲ ಛಲವಾದಿ ಸಮುದಾಯಕ್ಕೆ ಸೀಮಿತ ಗೊಳಿಸದೆ, ಓಬವ್ವನ ನಾಡಿನ ಅಸ್ಮಿತೆಯಾಗಿದ್ದಾರೆ ಎಂದರು. ಇದುವರೆಗೂ ಓಬವ್ವಳ ತವರು ಕೂಡ್ಲಿಗಿ ಎಂದು ರಾಜ್ಯ ಮಟ್ಟದಲ್ಲಿ ಅನೇಕರಿಗೆ ತಿಳಿದಿಲ್ಲ. ಚಿತ್ರದುರ್ಗದ ಕೋಟೆಯನ್ನು ರಕ್ಷಿಸಿದ ಮಹಾತಾಯಿ ಎಂದು ಬಣ್ಣಿಸಿ, ಇತಿಹಾಸ ಪುಟದಲ್ಲಿ ರಾರಾಜಿಸುತ್ತಿರುವ ಒಬ್ಬ ವನಿತೆಯ ಬಗ್ಗೆ ಒಂದು ವೃತ್ತ ಮಾಡುವುದ ರೊಂದಿಗೆ, ಸಮುದಾಯ ಭವನ ನಿರ್ಮಾಣ ಮಾಡುವುದ ರೊಂದಿಗೆ, ಉತ್ಸವಗಳನ್ನು ಆಚರಿಸುವುದ ರೊಂದಿಗೆ ಮಾತ್ರ ಇಂತಹ ಮಹನೀಯರುಗಳು ಜಯಂತಿಯನ್ನು ಅರ್ಥಪೂರ್ಣ ಗೊಳಿಸಲು ಸಾಧ್ಯವಿದೆ ಎಂದು ಶಾಸಕರು. ಅಭಿಪ್ರಾಯ ತಿಳಿಸಿದರು. ಹೀಗಾಗಲೇ ಕಳೆದ ವರ್ಷ ಗುಡೇಕೋಟೆಯಲ್ಲಿ ಅದ್ದೂರಿಯಾಗಿ ವೀರವನಿತೆ ಒನಕೆ ಓಬವ್ವಳ ಜಯಂತಿ ಉತ್ಸವವನ್ನು ಸಡಗರ, ಸಂಭ್ರಮದೊಂದಿಗೆ ಆಚರಿಸಿದ್ದೇವೆ. ಈ ಬಾರಿ ಕೂಡ ಪೂರ್ವ ಸಭೆಯಲ್ಲಿ ಒಮ್ಮತದ ನಿರ್ಣಯ ದೊಂದಿಗೆ ಉತ್ಸವವನ್ನು ಆಚರಿಸೋಣ, ಇದಕ್ಕೆ ಅಗತ್ಯವಾಗಿ ಎಲ್ಲರ ತಾಳ್ಮೆ, ಸಹಕಾರವನ್ನು ಕೋರುತ್ತೇನೆ ಎಂದರು. ಉಪನ್ಯಾಸವನ್ನು ಬಿಸಿಯೂಟ ಯೋಜನಾಧಿಕಾರಿ ಕೆ.ಜಿ. ಆಂಜನೇಯ ಓಬವ್ವಳ ಇತಿಹಾಸದ ರೋಚಕ ಕಥೆಯನ್ನು ಎಳೆ ಎಳೆಯಾಗಿ ಬಿಚ್ಚಿಟ್ಟರು. ನಾಗರಹಾವು ಚಲನ ಚಿತ್ರದಲ್ಲಿ ಪುಟ್ಟಣ್ಣ ಕಣಗಲ್ ಅವರು, ಹಾಡಿನಲ್ಲಿ ಬರುವ ದೃಶ್ಯದಲ್ಲಿ ಓಬವ್ವಳನ್ನು ಖಡ್ಗದೊಂದಿಗೆ ಇರಿದು ಕೊಲ್ಲುವ ಪ್ರಸಂಗ ಮಾತ್ರ ಒಪ್ಪುವಂತಿಲ್ಲ. ಹೈದರ್ ಅಲಿ ಸೈನಿಕರ ರುಂಡಗಳ ಚಂಡಾಡಿದ ನಂತರವೂ, ಸುಧೀರ್ಘ 2 ವರ್ಷಗಳ ಕಾಲ ವೀರವನಿತೆ ಒನಕೆ ಓಬವ್ವ ಬದುಕಿರುವ ಬಗ್ಗೆ ಸಾಕ್ಷಿಗಳಿವೆ ಎಂದರು. ದೊಡ್ಡ ಮಟ್ಟದಲ್ಲಿ ವಿಚಾರ ಸಂಕಿರಣಗಳನ್ನು ನಡೆಸುವ ಮೂಲಕ ಒನಕೆ ಓಬವ್ವಳ ಬಗ್ಗೆ ಇಂದಿನ ಪೀಳಿಗೆಗೆ ಗೊತ್ತಾಗುವಂತಹ ಕಾರ್ಯವಾಗ ಬೇಕು ಎಂದರು.



ಈ ಸಂದರ್ಭದಲ್ಲಿ ಒನಕೆ ಓಬವ್ವನ ಕುರಿತು ಉಪನ್ಯಾಸವನ್ನು ಆಂಜನೇಯ ಅವರು ನೀಡಿದ್ದು ಎಲ್ಲರ ಗಮನ ಸೆಳೆದರು.

ಈ ಸಂದರ್ಭದಲ್ಲಿ ತಹಶೀಲ್ದಾರರಾದ ಎಂ.ರೇಣುಕಾ, ಗ್ರೇಟು ತಹಶೀಲ್ದರಾದ ವಿ.ಕೆ ನೇತ್ರಾವತಿ, ವಿಶ್ವನಾಥ್ ಅಖಿಲ ಕರ್ನಾಟಕ ಓಬವ್ವಳ ಅಭಿಮಾನಿಗಳ ಸಂಘದ ಅಧ್ಯಕ್ಷರು ಯು.ಉಮೇಶ್ ಮತ್ತು ಅಖಿಲ ಕರ್ನಾಟಕ ಚಲವಾದಿ ಮಹಾಸಭಾದ ತಾಲೂಕು ಅಧ್ಯಕ್ಷರು ಮರವನಹಳ್ಳಿ ಮಾರಪ್ಪ, ಕರವೇ ತಾಲೂಕ ಅಧ್ಯಕ್ಷ ಕಾಟೇರ ಹಾಲೇಶ್, ಕಾಸಪ ರಾಜ್ಯ ಸರ್ಕಾರಿ ನೌಕರ ಸಂಘದ ತಾಲೂಕ ಅಧ್ಯಕ್ಷರಾದ ವೆಂಕಟೇಶ್, ಅಧ್ಯಕ್ಷರಾದ ಅಂಗಡಿ ವೀರೇಶ್ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಪದ್ಮನಾಭಕರಣಂ ಜಂಗಮ ಸಮಾಜದ ತಾಲೂಕ ಅಧ್ಯಕ್ಷರಾದ ಹಿರೇಮಠ ಗಂಗಾಧರಯ್ಯ, ಸೇರಿದಂತೆ ವಿವಿಧ ಸಮಾಜದ ಸಂಘಟನೆ ಅಧ್ಯಕ್ಷರುಗಳು ನೆರೆದಿದ್ದರು, ತಾಲೂಕಿನ ಸಾಧಕರಿಗೆ ಸನ್ಮಾನ ನೆರವೇರಿಸ ಲಾಯಿತು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ರಾಘವೇಂದ್ರ. ಬಿ.ಸಾಲುಮನೆ. ಕೂಡ್ಲಿಗಿ.ವಿಜಯನಗರ**

## ವೀರರಾಣಿ ಒನಕೆ ಓಬವ್ವ ಅವರ ಆದರ್ಶ ಗುಣಗಳನ್ನು ಅಳವಡಿಸಿಕೊಳ್ಳಿ – ದೊಡ್ಡಮನಿ

**ಸಿಹಿ ಕಹಿ ಸುದ್ದಿ**

**ರೋಣ :** ಸ್ವಾತಂತ್ರ್ಯ ಹೋರಾಟದ ಅನೇಕ ಮಹಿಳೆಯರಲ್ಲಿ ವೀರರಾಣಿ ಎಂದು ಹೆಸರು ಪಡೆದಿರುವ ಒನಕೆಯ ಒಬ್ಬವ ಒಬ್ಬರಾಗಿದ್ದಾರೆ. ಒನಕೆ ಒಬ್ಬವ ಅವರ ಧೈರ್ಯ ಮತ್ತು ಸಾಹಸವನ್ನು ಸಮಾಜ ಮೆಚ್ಚುವಂತ ಅಪಾರವಾದ ಕೊಡುಗೆಯನ್ನು ವೀರರಾಣಿ ಒನಕೆ ಒಬ್ಬವ ಅವರು ಕೊಟ್ಟು ಹೋಗಿದ್ದಾರೆ. ಇಂದಿನ ಮಹಿಳೆಯರು ಸಮಾಜದಲ್ಲಿ ವೀರರಾಣಿ ಒನಕೆ ಒಬ್ಬವ್ವ ಅವರ ಆದರ್ಶ ಗುಣಗಳನ್ನು ಅಳವಡಿಸಿ ಕೊಂಡು ಉತ್ತಮ ಸಮಾಜ ನಿರ್ಮಾಣ ಮಾಡುವುದರಲ್ಲಿ ಸಮಾಜದ ಮುಖ್ಯವಾಹಿನಿಗೆ ಬರುವಲ್ಲಿ ಮಹಿಳೆಯ ಪಾತ್ರ ಮುಖ್ಯವಾಗಿದೆ ಎಂದು ಚಲವಾದಿ ಸಮುದಾಯದ ರೋಣ ಗಜೇಂದ್ರಗಡ ತಾಲೂಕ ಅಧ್ಯಕ್ಷ ಸಂಜೆಯ ದೊಡ್ಡಮನಿ ಅವರು ರೋಣ ನಗರದ ತಹಶೀಲ್ದಾರ ಕಚೇರಿಯಲ್ಲಿ ವೀರರಾಣಿ ಒನಕೆ ಒಬ್ಬವ್ವ ಅವರ ಆದರ್ಶ ಗುಣಗಳನ್ನು ಅಳವಡಿಸಿ ಕೊಳ್ಳಲು ಮಾತನಾಡಿದರು. ಪ್ರಾಸ್ತಾವಿಕವಾಗಿ ಈ ಸಂದರ್ಭದಲ್ಲಿ ಉಪ ತಹಸೀಲ್ದಾರ ಗಣೇಶ ಕೊಪ್ಪದ. ಶಿರಸ್ತೇದಾರ ನಿಲೂಗಲ್ಸ್ ಪಿ.ಡಿ ಪಾಟೀಲ. ಶೋಭ ಬೀಳಗಿ, ನೀಲಮ್ಮ. ಹಿರಿಯಪ್ಪ ಮಾದರ. ಬಸವರಾಜ ಚಲವಾದಿ. ಆನಂದ ಅರಹುನಸಿ. ಬಸವರಾಜ ಪೂಜಾರ. ಭರಮಪ್ಪ ಕೊಳಪ್ಪನ್ನವರ. ಯಚ್ಚರಪ್ಪ ಚಲವಾದಿ, ಸುದೀಪ ತಲಗಾರ, ಗಣೇಶ ಚಲವಾದಿ. ಮಂಜುನಾಥ ಹೆಬ್ಬಸೂರ. ನಿಂಗಬಸಪ್ಪ ಕಡಿಯವರ ಸಮಾಜದ ಮುಖಂಡರು ಉಪಸ್ಥಿತರಿದ್ದರು.



**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಎಸ್.ವಿ.ಸಂಕನಗೌಡ್ರ ರೋಣ**

## ಶರೀಯತ್ ಮತ್ತು ವಕ್ಫ್ ಗಳ ಸಂರಕ್ಷಣೆ ಕುರಿತು ಜಾಗೃತಿ ನ,13 ರಂದು ಸಂಜೆ 7:15 ಕ್ಕೆ ಕಾರ್ಯಕ್ರಮ ನಡೆಯಲಿದೆ

**ಸಿಹಿ ಕಹಿ ಸುದ್ದಿ**

**ಮಾನ್ವಿ :** ಶರೀಯತ್ ಮತ್ತು ವಕ್ಫ್ ಸಂರಕ್ಷಣೆಯ ಕುರಿತು ಪ್ರತಿಯೊಬ್ಬ ನಾಗರೀಕರಿಗೆ ತಿಳಿಯುವ ಸಲುವಾಗಿ ನವಂಬರ್ 13 ರಂದು ಸಂಜೆ 6 ಗಂಟೆಗೆ ಖಾದ್ರಿ ಫಂಕ್ಷನ್ ಹಾಲ್ ನಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮುಸ್ಲಿಂ ಧರ್ಮದ ಗುರು ಸೈಯದ್ ಹಸನ್ ಜೀಶಾನ್ ಖಾದ್ರಿ ತಿಳಿಸಿದರು.

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದ ಖಾದ್ರಿ ಫಂಕ್ಷನ್ ಹಾಲ್ ನಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿ, ಶರಿಯತ್ ಸಂರಕ್ಷಣೆಯ ಜೊತೆಗೆ ಧಾರ್ಮಿಕ ಆಸ್ತಿಗಳ ಉಪಯೋಗ ಮತ್ತು ಕಾನೂನಾತ್ಮಕ ವಿಷಯಗಳನ್ನು ಬುದ್ಧಿ ಜೀವಿಗಳು ಆಗಮಿಸಲಿದ್ದಾರೆ ಎಂದರು.

ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾನೂನಿನ ವಿಷಯ ತಿಳಿದು ಕೊಂಡು ಅದರಂತೆ ನಡೆಯಬೇಕು.



ಹಾಗೆಯೇ ಏನಾದರು ಗೊಂದಲ ಮತ್ತು ಪ್ರಶ್ನೆಗಳಿದ್ದರೆ ಕೇಳುವುದಕ್ಕೆ ಅವಕಾಶ ಇದೆ ಎಂದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಜಿಲ್ಲಾ ಪ್ರವಾಸ

**ಬೆಳಗಾವಿ :** ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯು ನ. 14 ರಿಂದ ನ.16 ರವರೆಗೆ ಬೆಳಗಾವಿ ವಿಭಾಗದ ಧಾರವಾಡ, ಗದಗ, ಬಾಗಲಕೋಟ, ವಿಜಯಪುರ ಹಾಗೂ ಬೆಳಗಾವಿ ಜಿಲ್ಲೆಗಳ ಪ್ರವಾಸ ಕೈಗೊಂಡು ಅನುಸೂಚಿತ ಜಾತಿ ಮತ್ತು ಪಂಗಡಗಳ ಸಮುದಾಯದವರ ಅಭಿವೃದ್ಧಿಗಾಗಿ ಕೈಗೊಳ್ಳಲಾಗಿರುವ ವಿವಿಧ ಯೋಜನೆ, ಕಾರ್ಯಕ್ರಮಗಳ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಸಲಿದೆ.

ನವೆಂಬರ 16 ರಂದು ಮುಂಜಾನೆ 10.30 ಗಂಟೆಗೆ ಬೆಳಗಾವಿ ಸುವರ್ಣ ಸೌಧದ 3ನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಅನುಸೂಚಿತ ಜಾತಿ ಮತ್ತು ಪಂಗಡಗಳ ಸಮುದಾಯದವರ ಅಭಿವೃದ್ಧಿಗಾಗಿ ಕೈಗೊಳ್ಳಲಾಗಿರುವ ವಿವಿಧ ಯೋಜನೆ, ಕಾರ್ಯಕ್ರಮಗಳ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಸಲಿದೆ.

ನ.14 ರಂದು ಧಾರವಾಡ ಜಿಲ್ಲಾಧಿಕಾರಿಗಳ/ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಮುಂಜಾನೆ 10.30 ಗಂಟೆಗೆ ಬಾಗಲಕೋಟ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಧಾರವಾಡ ಹಾಗೂ ಗದಗ ಜಿಲ್ಲೆಗಳ, ನ.15 ರಂದು ಬಾಗಲಕೋಟ ಜಿಲ್ಲಾಧಿಕಾರಿಗಳ/ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಮುಂಜಾನೆ 10.30 ಗಂಟೆಗೆ ಪ್ರಗತಿ ಪರಿಶೀಲನಾ ಸಭೆಯನ್ನು ಜರುಗಿಸಲಿದೆ.

ಪಿ.ಎಂ.ನರೇಂದ್ರಸ್ವಾಮಿ ಯವರು ಅಧ್ಯಕ್ಷರಾಗಿರುವ ಸಮಿತಿಯಲ್ಲಿ ರಮೇಶ ಲಕ್ಷ್ಮಣರಾವ ಜಾರಕಿಹೊಳಿ, ಡಾ.ಎಂ.ಚಂದ್ರಪ್ಪ, ದುರ್ಯೋಧನ ಐಹೊಳೆ, ಜಿ.ಹಂಪಯ್ಯ ನಾಯಕ್ಕ ಬಲ್ಲಟಗಿ, ಎಸ್. ಎನ್.ಸುಬ್ಬಾರೆಡ್ಡಿ, ಬಸನಗೌಡ ತುರುವಿಹಾಳ, ಅಬ್ಬಯ್ಯ ಪ್ರಸಾದ, ಬಸವರಾಜ ಮತ್ತಿಮುಡ, ನೇಮಿರಾಜ್ ನಾಯ್ಕ, ಎನ್.ಶ್ರೀನಿವಾಸಯ್ಯ, ಬಿ.ದೇವೇಂದ್ರಪ್ಪ, ಕೆ.ಸಿ.ವಿರೇಂದ್ರ ಪಪ್ಪಿ, ಕೃಷ್ಣಾ ನಾಯ್ಕ ಕೆ., ಕೆ.ಎಸ್.ಬಸವಂತಪ್ಪ, ಎನ್.ರವಿಕುಮಾರ, ಡಾ.ಡಿ.ತಿಮ್ಮಯ್ಯ, ರಾಜೇಂದ್ರ ರಾಜಣ್ಣ, ಸಿ.ಎನ್. ಮಂಜೇಗೌಡಹಾಗೂಶ್ರೀಮತಿಹೇಮಲತಾನಾಯಕ್ ಅವರುಗಳು ಸಮಿತಿಯ ಸದಸ್ಯರುಗಳಾಗಿರುತ್ತಾರೆ.

## ರಾಷ್ಟ್ರಮಟ್ಟದಲ್ಲಿ ವಿದ್ಯಾರ್ಥಿ ಸಾಧನೆ: ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅಭಿನಂದನೆ



**ಬೆಳಗಾವಿ :** ಪ್ಯಾರಾ ಸ್ವಿಮ್ಮಿಂಗ್ ನಲ್ಲಿ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಸೋಮವಾರ ಅಭಿನಂದಿಸಿ ಶುಭ ಕೋರಿದರು.

ಬೆಳಗಾವಿ ಮಾಹೇಶ್ವರಿ ಅಂಧ ಮಕ್ಕಳ ಶಾಲೆಯ 8ನೇ ತರಗತಿಯಪ್ರಜ್ವಲ್‌ಸು.ಹನುಮನಟ್ಟಿಎಂಬ ವಿದ್ಯಾರ್ಥಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಪ್ಯಾರಾ ಸ್ವಿಮಿಂಗ್ ಚಾಂಪಿಯನ್ ಷಿಪ್ ನ ವಿವಿಧ ಪ್ರಿ ಸ್ಟೈಲ್ ಹಾಗೂ ಬ್ಯಾಕ್ ಸ್ಟ್ರೋಕ್ ಈಜು ಸ್ಪರ್ಧೆಗಳಲ್ಲಿ ಭಾಗವಹಿಸಿ, ಒಟ್ಟು 6 ಚಿನ್ನದ ಪದಕಗಳನ್ನು ಪಡೆದುಕೊಂಡಿದ್ದಾನೆ. ಬೆಳಗಾವಿ ಗ್ರಾಮೀಣ ಕ್ಷೇತ್ರದ ಕೆಕೆ ಕೊಪ್ಪ ಗ್ರಾಮದ ಪ್ರಜ್ವಲ್ ಅಪ್ಪಟ ಹಳ್ಳಿ ಪ್ರತಿಭೆಯಾಗಿದ್ದು, ಭಾಗಶಃ ಅಂಧನಾಗಿದ್ದರು ಕೂಡ ಛಲ ಬಿಡದೆ ಸತತ ಪ್ರಯತ್ನ, ಶಿಕ್ಷಕರ ಮಾರ್ಗದರ್ಶನದ ಫಲವಾಗಿ 6 ಚಿನ್ನದ ಪದಕಗಳನ್ನು ಪಡೆದಿದ್ದಾನೆ. ಈತನ ಸಾಧನೆಯ ಬಗ್ಗೆ ಮಾಹಿತಿ ಪಡೆದ ಸಚಿವರು, ವಿದ್ಯಾರ್ಥಿಗೆ ಅಭಿನಂದಿಸಿ, ಮುಂದಿನ ಭವಿಷ್ಯಕ್ಕೆ ಶುಭ ಕೋರಿದರು. ಜೊತೆಗೆ ಅಗತ್ಯವಾದ ಎಲ್ಲ ರೀತಿಯ ನೆರವು ನೀಡುವ ಭರವಸೆ ನೀಡಿದರು.

ಈ ವೇಳೆ ಮಾಹೇಶ್ವರಿ ಅಂಧ ಮಕ್ಕಳ ಶಾಲೆಯ ದೈಹಿಕ ಶಿಕ್ಷಕರಾದ ಸುರೇಶ ಸು ಮಾದಿಗರ, ಮುಖ್ಯೋಪಾಧ್ಯಾಯರಾದ ಅನಿತಾ ಗಾವಡೆ, ಸಂಗೀತ ಶಿಕ್ಷಕಿ ಸ್ಮಿತಾ ಮಿಟಗಾರ ಮುಂತಾದವರು ಉಪಸ್ಥಿತರಿದ್ದರು.

## ಪ್ರಸಕ್ತ ವರ್ಷದಲ್ಲಿ ಏಕಕಾಲಕ್ಕೆ ಶ್ರೀ ಗವಿಸಿದ್ದೇಶ್ವರ ವಿದ್ಯಾರ್ಥಿಗಳ ಉಚಿತ ವಸತಿ ಹಾಗೂ ಪ್ರಸಾದ ನಿಲಯದ 24*7 ಡಿಜಿಟಲ್ ಗ್ರಂಥಾಲಯದ 28 ವಿದ್ಯಾರ್ಥಿಗಳು ಪೋಲೀಸ್ ಇಲಾಖೆಗೆ ಆಯ್ಕೆ

**ಕೊಪ್ಪಳ :** ಶ್ರೀ ಗವಿಮಠ ತ್ರಿವಿಧ ದಾಸೋಹದ ನೆಲೆಯಾಗಿದೆ. 2021ರ ಕರೋನಾ ಮಹಾಮಾರಿಯ ಹಾವಳಿಯ ಸಂದರ್ಭದಲ್ಲಿ 24*7 ಡಿಜಿಟಲ್ ಗ್ರಂಥಾಲಯವನ್ನು ಗವಿಸಿದ್ಧೇಶ್ವರ ಮಹಾವಿದ್ಯಾಲಯದಲ್ಲಿ ಜನವರಿ 2021 ರಲ್ಲಿ ಸ್ಥಾಪಿಸುವುದರ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಮತ್ತೊಂದು ಕೊಡುಗೆಯನ್ನು ಶ್ರೀ ಗವಿಮಠವು ನೀಡಿದೆ. ಈ ಗ್ರಂಥಾಲಯದಲ್ಲಿ ಪದವಿ ಮುಗಿಸಿ ವಿವಿಧ ಸರಕಾರಿ ಕೆಲಸಕ್ಕೆ ತಯಾರಿ ನಡೆಸುವ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಅವಕಾಶವನ್ನು ಕಲ್ಪಿಸಲಾಗಿದೆ. ಸದರಿ ಗ್ರಂಥಾಲಯದ ಮೂರು ವರ್ಷಗಳ ಅವಧಿಯಲ್ಲಿ ಸುಮಾರು 1800 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಉತ್ತರಕರ್ನಾಟಕದ ಎಲ್ಲಾ ಜಿಲ್ಲೆಗಳಿಂದ ಬೇರೆ ಬೇರೆ ಜಿಲ್ಲೆಗಳಾದ ಹಾಸನ, ಮಂಡ್ಯ, ಚಿಕ್ಕಮಂಗಳೂರು, ರಾಯಚೂರು, ಬೀದರ, ಬಳ್ಳಾರಿ, ಹೊಸಪೇಟೆ, ಕೊಪ್ಪಳ, ಗುಲ್ಬರ್ಗ. ಇಲ್ಲಿಯವರೆಗೆ ಒಟ್ಟು 16 ಜಿಲ್ಲೆಗಳಿಂದ ಆಗಮಿಸಿ ಇದರ ಉಪಯೋಗ ಪಡೆದಿದ್ದಾರೆ ಹಾಗೂ ಪಡೆಯುತ್ತಿದ್ದಾರೆ. ಸದ್ಯ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬೇರೆ ಬೇರೆ ಪರೀ–ಕ್ಷೆಗಾಗಿ ತಯಾರಿ ನಡೆಸಿದ್ದಾರೆ. ಈ ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ವಸತಿ ಸಹಿತ ಗ್ರಂಥಾಲಯದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಕಳೆದ ಈ ಮೂರು ವರ್ಷಗಳಲ್ಲಿ ಹೆಚ್ಚು ವಿದ್ಯಾರ್ಥಿಗಳು ವಿವಿಧ ಸರಕಾರಿ ಹುದ್ದೆಗಳನ್ನು ಪಡೆಯುವ ಮೂಲಕ ತಮ್ಮ ಜೀವನವನ್ನು ಹಸನಾಗಿಸಿಕೊಂಡಿದ್ದಾರೆ. ಪ್ರಸಕ್ತ ವರ್ಷದ ಜನವರಿ 2024ರಲ್ಲಿ ಪೋಲೀಸ್ ಕಾನ್ಸ್ಟೇಬಲ್ ಹುದ್ದೆಗಾಗಿ ನಡೆದ ಪರೀ–ಕ್ಷೆಯಲಿ ಶ್ರೀ ಗವಿಸಿದ್ಧೇಶ್ವರ ವಿದ್ಯಾರ್ಥಿಗಳ ಉಚಿತ ವಸತಿ ಹಾಗೂ ಪ್ರಸಾದ ನಿಲಯದ 24*7 ಡಿಜಿಟಲ್ ಗ್ರಂಥಾಲಯದ 28 ವಿದ್ಯಾರ್ಥಿಗಳು ಪೋಲೀಸ್ ಇಲಾಖೆಗೆ ಆಯ್ಕೆಯಾಗಿರುವುದು ತುಂಬಾ ಹೆಮ್ಮೆಯ ವಿಷಯವಾಗಿದೆ. ಇದಲ್ಲದೆ 9 ವಿದ್ಯಾರ್ಥಿಗಳು ಶಿಕ್ಷಣ ಇಲಾಖೆಗೆ ಶಿಕ್ಷಕರಾಗಿ, 2 ವಿದ್ಯಾರ್ಥಿಗಳು ಅಕೌಂಟೆ–ಂಟ್ ಹುದ್ದೆಗಳಿಗೆ, 2 ವಿದ್ಯಾರ್ಥಿಗಳು ಅಸಿಸ್ಟೆಂಟ್ ಇಂಜಿನಿಯರ್, 2 ವಿದ್ಯಾರ್ಥಿಗಳು ಲೈಬ್ರರಿ ಇನ್ಸ್ಟ್ರಕ್ಟರ್, ಒಬ್ಬ ವಿದ್ಯಾರ್ಥಿನಿ ಇನ್ಸ್ಪೆಕ್ಟರ್ ಹುದ್ದೆಗಳಿಗೆ ಆಯ್ಕೆಯಾಗಿರುವುದು ತುಂಬಾ ಸಂತೋಷದಾಯಕ ವಿಷಯವಾಗಿದೆ. ಪ್ರಸಕ್ತ ವರ್ಷದಲ್ಲಿ ಏಕಕಾಲಕ್ಕೆ ಪೋಲೀಸ್ ಇಲಾಖೆಗೆ ಆಯ್ಕೆಯಾದ ನಮ್ಮ ಗ್ರಂಥಾಲಯದ 28 ವಿದ್ಯಾರ್ಥಿಗಳನ್ನು ಮತ್ತು ವಿವಿಧ ಸರಕಾರಿ ಹುದ್ದೆಗಳನ್ನು ಪಡೆದ ಎಲ್ಲಾ ವಿದ್ಯಾರ್ಥಿಗಳನ್ನು ಕರೆಸಿ ಅಭಿನಂದಿಸಿ, ಶ್ರೀಮಠದಿಂದ ಸನ್ಮಾನಿಸಿ, ಶುಭ ಹಾರೈಸಲಾಯಿತು.



## ಬಾಲ ಕಾರ್ಮಿಕ ಪದ್ಧತಿ ನಿಷೇಧ ಕಟ್ಟುನಿಟ್ಟಾಗಿ ಜಾರಿಯಾಗಬೇಕು: ತಹಶಿಲ್ದಾರ್ ಡಾ. ಪ್ರತಿಭಾ ಆರ್.

**ಕಾರ್ಕಳ :** ತಹಶೀಲ್ದಾರ್ ಡಾ. ಪ್ರತಿಭಾ ಆರ್ ರವರ ಅಧ್ಯಕ್ಷತೆಯಲ್ಲಿ ಕಾರ್ಕಳ ತಾಲ್ಲೂಕಿನಲ್ಲಿ ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಪತ್ತೆ ಮಾಡಿ ಪುರ್ನವಸತಿ ಕಲ್ಪಿಸಲು ತಾಲ್ಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿಯನ್ನುರಚಿಸಲಾಗಿದೆ. ತಹಶೀಲ್ದಾರ್ ಡಾ.ಪ್ರತಿಭಾ ಆರ್ ಅಧ್ಯಕ್ಷತೆಯಲ್ಲಿ ದಿನಾಂಕ 04–11–2024ರಂದು ತಹಶೀಲ್ದಾರ್ ಕಚೇರಿಯಲ್ಲಿ ಸಭೆ ನಡೆಯಿತು.

ತಹಶಿಲ್ದಾರ್ ಡಾ. ಪ್ರತಿಭಾ ಆರ್ ಟಾಸ್ಕ್ ಫೋರ್ಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

'ಬಾಲ ಕಾರ್ಮಿಕರ ರಕ್ಷಣೆಗಾಗಿ ತಾಲ್ಲೂಕಿನಾದ್ಯಂತ ಅನಿರೀಕ್ಷಿತ ದಾಳಿಗಳನ್ನು ಹೆಚ್ಚಾಗಿ ನಡೆಸಬೇಕು. ಬಾಲ ಕಾರ್ಮಿಕರನ್ನು ದುಡಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧ. 18 ವರ್ಷದೊಳಗಿನವರನ್ನು ಅಪಾಯಕಾರಿ ಕ್ಷೇತ್ರಗಳಲ್ಲಿ ದುಡಿಸಿಕೊಳ್ಳುವಂತಿಲ್ಲ' ಎಂದರು.

ಕಾನೂನು ಉಲ್ಲಂಘಿಸಿದರೆ ಕನಿಷ್ಠ 6 ತಿಂಗಳಿಂದ ಗರಿಷ್ಠ 2 ವರ್ಷದವರೆಗೆ ಜೈಲು ಶಿಕ್ಷೆ ಹಾಗೂ ?20 ಸಾವಿರದಿಂದ ?50 ಸಾವಿರದವರೆಗೆ ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ. ಬಾಲ ಕಾರ್ಮಿಕ ಪದ್ಧತಿಗೆ ಆಸ್ಪದ ನೀಡದಂತೆ ಎಚ್ಚರಿಕೆಯಿಂದ ಕೆಲಸ ಮಾಡಬೇಕು' ಎಂದು ಹೇಳಿದರು.

'ಬಾಲ ಕಾರ್ಮಿಕ ಪದ್ಧತಿ ಹಾಗೂ ಆ ಕುರಿತು ಇರುವ ಕಾನೂನಿನ ಅರಿವು– ನೆರವು ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಆಟೊ ಪ್ರಚಾರ, ಬೀದಿ ನಾಟಕ, ಗೋಡೆ ಬರಹದ ಜೊತೆಗೆ ಕರಪತ್ರ ಮತ್ತು ಭಿತ್ತಿ ಚಿತ್ರಗಳನ್ನು ಹಂಚಿ ಜಾಗೃತಿ ಮೂಡಿಸಬೇಕು' ಎಂದು ಸಲಹೆ ನೀಡಿದರು.



'ಸಾರ್ವಜನಿಕರು ಸಹ ತಮ್ಮ ಸುತ್ತಮುತ್ತಲಿನ ಪ್ರದೇಶದಲ್ಲಿ ಯಾರಾದರೂ ಮಕ್ಕಳನ್ನು ನೇಮಿಸಿಕೊಂಡಿರುವುದು ಕಂಡುಬಂದಲ್ಲಿ ತಕ್ಷಣವೇ ಮಕ್ಕಳ ಸಹಾಯವಾಣಿ? 1098 ಮತ್ತು ಪೊಲೀಸ್ ಇಲಾಖೆಯ ಸಹಾಯವಾಣಿ? 112 ಸಂಖ್ಯೆಗೆ ಕರೆ ಮಾಡಿ ಮಕ್ಕಳ ರಕ್ಷಣೆಗೆ ಸಹಕಾರ ನೀಡಬೇಕು' ಎಂದರು.

ಯಾವ ಮಗುವೂ ಶಾಲೆಯಿಂದ ಹೊರಗುಳಿಯಬಾರದು ಎಂದು ಶಿಕ್ಷ ಇಲಾಖೆಯ ಅಧಿಕಾರಿಗಳಿಗೆ ತಹಶಿಲ್ದಾರ್ ಪ್ರತಿಭಾ ತಾಕೀತು ಮಾಡಿದರು.

ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ ಪದ್ಧತಿಯು ಮಕ್ಕಳನ್ನು ದೈಹಿಕವಾಗಿ, ನೈತಿಕವಾಗಿ ಮಾನಸಿಕವಾಗಿ ಹಾಗೂ ಆರ್ಥಿಕವಾಗಿ ಶೋಷಣೆಗೆ ಒಳಪಡಿಸಿ ಅವರ ಶಿಕ್ಷಣ ಹಾಗೂ ಸರ್ವಾಂಗೀಣ ಪ್ರಗತಿಯ ಅವಕಾಶಗಳನ್ನು ತಡೆಗಟ್ಟುತ್ತದೆ.

ಕ್ರಷರ್ ಹಾಗೂ ಕಲ್ಲು ಕೋರಿಗಳಲ್ಲಿ ಬಾಲ ಕಾರ್ಮಿಕ ಪ್ರಕರಣಗಳು ಕಂಡುಬರುವ ಸಾಧ್ಯತೆಯಿದ್ದು ಸದರಿ ಸ್ಥಳಗಳಲ್ಲಿ ಬಾಲ್ಯಾವಸ್ಥೆಯ ಮತ್ತು ಕಿಶೋರಾವಸ್ಥೆಯ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ 1986 ಕಲಂ – 17 ರಡಿ ನೇಮಕಗೊಂಡಿರುವ ನಿರೀಕ್ಷಕರು ಜಂಟಿ ತಪಾಸಣೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ತಹಶಿಲ್ದಾರ್ ಪ್ರತಿಭಾ ಆರ್ ಸಭೆಗೆ ತಿಳಿಸಿದರು. ಸದರಿ ಸಭೆಗೆ ಟಾಸ್ಕ್ ಫೋರ್ಸ್ ಸಮಿತಿಯ ಸದಸ್ಯರುಗಳು ಹಾಜರಿದ್ದರು. ಕಾರ್ಮಿಕ ಇಲಾಖೆ ಅಧಿಕಾರಿ ನವೀನ್ ಕಾರ್ಯಕ್ರಮ ನಿರೂಪಿಸಿದರು.

# ಶರಣರ ಅನುಭವದ ನುಡಿಗಳೇ ದಾರಿದೀಪ




**ವಿಜಯಪುರ :** ಹನ್ನೆರಡನೆಯ ಶತಮಾನದಲ್ಲಶರಣರು ತಮ್ಮ ವಚನಗಳ ಮೂಲಕ ಸನ್ನಡತೆಯಿಂದ ನಡೆಯಲು ಸಂದೇಶ ನೀಡಿದ್ದಾರೆ. ಅದರಲ್ಲಿ ಕಾಯಕ, ದಾಸೋಹ, ಮಾಧರಿಯಾಗಬೇಕು. ಬಸವಾದಿ ಶರಣರ ಚಿಂತನೆಯಿಂದ ಅವರ ಅನುಭವದ ನುಡಿಗಳೇ ಬದುಕು ಸಮೃದ್ಧಿ ಎಂದು ಸಹಾಯಕ ಪ್ರಾಧ್ಯಾಪಕ ಡಾ. ಎಮ.ಎಸ್. ಮಾಗಣಗೇರಿ ಹೇಳಿದರು.

ನಗರದ ಅಖಿಲ ಭಾರತವೀರಶೈವ ಲಿಂಗಾಯತ ಮಹಾಸಭಾ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಿದ್ದ ಮಾಸಿಕ ಶಿವಾನುಭವ ಅಂಗವಾಗಿ ಚನ್ನಬಸವಣ್ಣನವರ ಅನುಭಾವ ಕುರಿತು ಉಪನ್ಯಾಸ ನೀಡಿದ ಅವರು ಅಜಾತ ವಿಚಾರ ಜ್ಞಾನದ ಅರಿವು ನಿಸ್ವಾರ್ಥ ಬದುಕನ್ನು ಬಾಳಿ ತತ್ವ ಆದರ್ಶಗಳಿಂದ ಸತ್ಯ, ನಿಷ್ಠೆ, ಕಾಯಕದಿಂದ ಸಾಕ್ಷಾತ್ಕಾರ ಪಡೆದವರು. ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ, ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ ಎಂಬ ಬಸವಣ್ಣನವರ ವಚನದಿಂದ ಪ್ರಭಾವಿತರಾಗಿ ಅರಿವೇ ಗುರು ಎಂಬುದನ್ನು ತನ್ನಲ್ಲಿ ಅಳವಡಿಸಿಕೊಂಡು, ಸ್ವಜ್ಞಾನ, ಷಡಸ್ಥಲ ಜ್ಞಾನ ಅಭಿಪ್ರಾಯದಿಂದ ಅನುಭವ ಪಡೆದು ಅರಿವು, ಅಚಾರಗಳಿಂದ ಅರಿತವರು ಅಲ್ಲಮ ಪ್ರಭವಿನ ನಂತರದ ಸ್ಥಾನ ಚನ್ನಬಸವಣ್ಣನವರದು, ವಚನ ಸಾಹಿತ್ಯವನ್ನು ರಕ್ಷಣೆ ಮಾಡಿದ ಕೆಲಸ ತುಂಬಾ ಅಮೋಘ, ಅವರು ರಚಿಸಿದ 1777 ವಚನಗಳು ಲಭ್ಯವಾಗಿವೆ ಎಂದರು.

ಮುಖ್ಯ ಅತಿಥಿಯಾಗಿ ವಿದ್ಯಾವತಿ ಅಂಕಲಗಿ ಮಾತನಾಡುತ್ತ ನಡೆ, ನುಡಿ ಪರಿಶುದ್ಧವಾಗಿರಬೇಕು. ಮನಸ್ಸು ಶಾಂತವಾಗಿರಬೇಕು, ಶರಣರ ಅನುಭವದ ನುಡಿಗಳು, ಆಳ, ಅಗಲ ನಿಲುಕಲು ಸಾಧ್ಯವಿಲ್ಲ ಚನ್ನಬಸವಣ್ಣನವರ ಅನುಭವದ ಅನುಭಾವದಿಂದ ಕೂಡಿದಂತಹದು ಅವರ ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಜಿಲ್ಲಾಧ್ಯಕ್ಷ ವಿ.ಸಿ. ನಾಗಠಾಣ ಅಧ್ಯಕ್ಷತೆವಹಿಸಿ ಚನ್ನಬಸವಣ್ಣನವರು ಕೇವಲ 24 ವರ್ಷ ಮಾತ್ರ ಬದುಕಿನದವರು ಪ್ರಾಯದಲ್ಲಿ ಅವರ ಕೀರ್ತಿ ಜ್ಞಾನ ಅಪಾರವಾದುದು, ಅನುಭವ ಮಂಟಪದ ಪರಿಸರದಲ್ಲಿ ಬೆಳೆದವರು. ವಚನ ಸಾಹಿತ್ಯದ ಮೂಲಕ ಜಲ, ತಪಗಳ ಪೂಜೆ ಬೇಕಾಗಿಲ್ಲ, ಮತ್ತು ಕೃತಿಗೂ ವ್ಯತ್ಯಾಸವಾಗಬಾರದು, ಅವರ ವಚನದ ನುಡಿಗಳು ತುಂಬಾ ಶ್ರೇಷ್ಠ ಎಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದ ಶ್ರೀಮತಿ ದ್ರಾಕ್ಷಾಯಣಿ ಬಿರಾದಾರವನ್ನು ಜಿಲ್ಲಾಧ್ಯಕ್ಷರು ಸನ್ಮಾನಿಸಿ ಗೌರವಿಸಲಾಯಿತು. ಶರಣೆ ಅಕ್ಕಮಹಾದೇವಿ ಬುರ್ಲಿ, ವಿಠ್ಠಲ ತೇಲಿ, ಸಹದೇವ ನಾಡಗೌಡರ, ಅಮರಣ್ಣವರ, ಎಸ್.ಎನ್. ಶಿವಣಗಿ,ಮಹಾದೇವ ಹಾಲಳ್ಳಿ, ಶಿವಪುತ್ರ ಪೋಳ, ಈಶ್ವರಗೊಂಡ ಬಸವರಾಜ ಒಂಟಗೂಡಿ, ತಾಲೂಕಾ ಅಧ್ಯಕ್ಷ ಬಸವರಾಜ ಇಟ್ಟಂಗಿ ಮ.ನು. ಪತ್ತಾರ, ಕಾಶಿನಾಥ ಅಣೆಪ್ಪನವರ, ಉಪಸ್ಥಿತರಿದ್ದರು. ವಿಠ್ಠಲ ತೇಲಿ ಸ್ವಾಗತಿಸಿದರು. ಎಂ.ಜಿ. ಯಾದವಾಡ ವಂದಿಸಿದರು. ಸಾಹಿತಿ ಸಂಗಮೇಶ

# ಶ್ರೀ ಕೃಷ್ಣ ಗೀತಾ ಗ್ರುಪ್‌ನಿಂದ ನಗರದಲ್ಲಿ ಸಂವಹನ ಕಾರ್ಯಕ್ರಮ



**ವಿಜಯಪುರ :** ಸಮಾಜದಲ್ಲಿನ ಎಲ್ಲ ವರ್ಗದ ಜನರಿಗೆ ಉಚಿತವಾಗಿ ಶ್ರೀಮಂದ್ಭಗವದ್ಗೀತೆಂಯಂನ್ನು ಹೇಳಿ ಕೊಡುತ್ತಿರುವ ನಗರದ ದೀವಟಗೇರಿಗಲ್ಲಿಯ ಶ್ರೀ ಕೃಷ್ಣ ಗೀತಾ ಗ್ರುಪ್‌ನಿಂದ ರವಿವಾರ ಮಕ್ಕಳು ತಾವು ಕಲಿತ ಗೀತೆಯಿಂದ, ಸಮಾಜ ಹೇಗೆ ಗುರುತಿಸಿ ಗೌರ ವಿಸುವದು, ತಮ್ಮ ಶಿಕ್ಷಣದಲ್ಲಿ ಕಂಡ ಬದಲಾವಣೆ ಕುರಿತು ಸಂವಹನ ಕಾರ್ಯಕ್ರಮವನ್ನು ರವಿವಾರ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮುಂಬೈ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಹಾಗೂ ವಾಣಿಜ್ಯ ಪುಸ್ತಕ ಲೇಖಕ ಅಜಿತ ಉಮರಾಣಿ ಮಾತನಾಡಿ, ಮಕ್ಕಳು ಶಿಕ್ಷಣದಲ್ಲಿ ಕಂಡ ಉನ್ನತಿ ಕುರಿತು ಸಂತೋಷಪಟ್ಟರು.

ಅಧ್ಯಕ್ಷತೆಯನ್ನು ಭಾರತ ಸರ್ಕಾರದ ನಿವೃತ್ತ ಅಧಿಕಾರಿ ಹಾಗೂ ಸಂಗೀತ ಕಲಾವಿದ ಅಶೋಕ ಉಮರಾಣಿ ವಹಿಸಿದ್ದರು.

ಮಕ್ಕಳ ಗೀತೆಯ ವಾಚನದಿಂದ ಕಾರ್ಯಕ್ರಮ ಪ್ರಾರಂಭಗೊಂಡಿತು. ಮಕ್ಕಳು ಗೀತೆಯ ವಾಚನದಿಂದ ತಾವು ಕಂಡ ಬದ ಲಾವಣೆ, ಗೌರವ ಇತ್ಯಾದಿಗಳ ಕುರಿತು ವಿವರಿಸಿದರು. ಗ್ರುಪ್‌ನ ಸಂಚಾಲಕ ನಿವೃತ್ತ ಖಜಾನೆ ಅಧಿಕಾರಿ ಸುರೇಂದ್ರ ಮುತಾಲೀಕ ಪ್ರಸ್ತಾವಿಕವಾಗಿ ಮಾತನಾಡಿದರು. ನಿವೃತ್ತ ಪ್ರಾಂಶುಪಾಲ ರಮೇಶ ಪುರಾಣಿಕ, ಅಶೋಕ ದೀಕ್ಷಿತ, ಲಕ್ಷ್ಮಿಕಾಂತ ಕುಲಕರ್ಣಿ ಮಾತನಾಡಿದರು.

ವಿದ್ಯಾರ್ಥಿಗಳಾದ ರಾಧಿಕಾ ಕುಲಕರ್ಣಿ ಕಾರ್ಯಕ್ರಮ ನಿರೂಪಣೆ ಮಾಡಿದರು. ಅನುಷಾ ಶಿರೂರ ಸ್ವಾಗತಿಸಿದರು. ಅನ್ನಪೂರ್ಣ ಕೊರಬು ಸನ್ಮಾನ ನಡೆಸಿಕೊಟ್ಟರು. ಶೃದ್ಧಾ ಜಾಧವ ಅತಿಥಿಗಳನ್ನು ಪರಿಚಯಿಸಿದರು. ಪಲ್ಲವಿ ಕುಲಕರ್ಣಿ ವಂದಿಸಿದರು.

# ಸರ್ಕಾರದಿಂದ ವಕ್ಫ ಆಸ್ತಿ ಪರಿವರ್ತನೆ ಕಾರ್ಯ: ನಿರಾಣಿ



**ಬೀಳಗಿ :** ರಾಜ್ಯ ಕಾಂಗ್ರೆಸ್ ಸರಕಾರ ವಕ್ಫ ಆಸ್ತಿಯನ್ನು ಪರಿವರ್ತನೆ ಮಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಅನೇಕ ರೈತರ ಜಮೀನುಗಳ ಉತಾರನಲ್ಲಿ ವಕ್ಫ ಆಸ್ತಿಯಾಗಿ ನಮೂದು ಮಾಡುವ ಕಾರ್ಯ ಸರಕಾರ ಕೈಗೊಂಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಎಚ್ ಆರ್ ನಿರಾಣಿ ಆರೋಪಿಸಿದರು.

ಪಟ್ಟಣದ ಬಿಜೆಪಿ ಕಾರ್ಯಾಲಯದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ಧೇಶಿಸಿ ಅವರು ಮಾತನಾಡಿದರು.

ಸಚಿವ ಜಮೀರ್ ಅಹ್ಮದ್‌ರವರು ವಿಜಯಪುರ ಜಿಲ್ಲೆಗೆ ಆಗಮಿಸಿ ಜಿಲ್ಲಾಧಿಕಾರಿಗಳ ಮೂಲಕ ಅನೇಕ ರೈತರಿಗೆ ನೋಟಿಸ್ ಕೊಡಿಸುವಂತದ ಕೆಲಸ ಮಾಡಿದ್ದಾರೆ. ರಾಜ್ಯದಲ್ಲಿ ಪಕ್ಷ ಕಾಯ್ದೆಯ ಕಾರಣಕ್ಕಾಗಿ ರೈತರು, ಮಠಮಾನ್ಯಗಳು ಆತಂಕದಲ್ಲಿದ್ದಾರೆ. ನೂರಾರು ವರ್ಷಗಳಿಂದ ಹಿರಿಯರು ಮಾಡಿಕೊಂಡು ಬಂದ ಭೂಮಿಯನ್ನ ವಕ್ಫ ಆಸ್ತಿಯಾಗಿ ಪರಿವರ್ತನೆ ಮಾಡುವಂತ ಹುನ್ನಾರ ಕಾಂಗ್ರೆಸ್ ಸರಕಾರದಿಂದ ನಡೆದಿದೆ. ಅಲ್ಪಸಂಖ್ಯಾತ ಸಮುದಾಯಗಳ ತೃಪ್ತಿಪಡಿಸುವ ಉದ್ದೇಶದಿಂದ ರೈತರನ್ನು ಒಕ್ಕಲು ಎಬ್ಬಿಸುವಂತಹ ಕೆಲಸ ಸರಕಾರ ಮಾಡುತ್ತಿದೆ. 1974ರ ಗೆಜೆಟ್ ಆಗಿರೋ ಪ್ರಕಾರ ರೈತರ ಕೃಷಿಜಮೀನುಗಳನ್ನು, ಮಠ-ಮಂದಿರ ಗ್ರಾಮ ಆಸ್ತಿಗಳನ್ನೂ ವಕ್ಫ ಹೆಸರಿನಲ್ಲಿ ಕಂದಾಯ ದಾಖಲೆಗಳಲ್ಲಿ ಇಂದಿಕರಿಸಿಕೊಳ್ಳುವಂತೆ ಕೆಲಸ ಡಿಸಿ ಮುಖಾಂತರ ನಡೆದಿದೆ.

ಗೋವಿಂದ ಕಾರಜೋಳ ನೇತೃತ್ವದಲ್ಲಿ ಬಿಜೆಪಿ ಪಕ್ಷ ಅಧ್ಯಯನ ತಂಡ ವಿಜಯಪುರ ಜಿಲ್ಲೆಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದಾಗ ಪಡಗನೂರ ಗ್ರಾಮದ ಪುರಾತನ ಸೋಮೇಶ್ವರ ದೇವಾಲಯ ವಕ್ಫ ನಮೂದಾಗಿದೆ.

50 ವರ್ಷದವರೆಗೂ ಇಂದಿಕರಣ ಮಾಡದ ಇಲಾಖೆಗೆ ಈ ತಕ್ಷಣ ಇಂದಿಕರಿಸಿಕೊಳ್ಳುವ ಹಿಂದಿನ ಉದ್ದೇಶ-ಕಾಂಗ್ರೆಸ್ ನೇತೃತ್ವದು ಎಂದು ಸಿದ್ದರಾಮಯ್ಯ ಸರಕಾರ ತುಷ್ಟಿಕರಣ ನೀತಿಯನ್ನು ಅನುಸರಿಸುತ್ತಿದೆ. ಆರ್‌ಟಿ.ಸಿ. ಕಲಂ 09 ಹಾಗೂ 11ರಲ್ಲಿ ಪತ್ರ ಹೆಸರು ನಮೂದಿಸಲಾಗಿದೆ. ಹೀಗೆ ರೈತರು ವಿಭಿನ್ನ ತರಹದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಒಂದು ಕಡೆ ಬಡ ಮುಸ್ಲಿಮರನ್ನು ಉದ್ಧಾರ ಮಾಡಬೇಕಾದ ಆಸ್ತಿಗಳನ್ನು ಲಪಟಾಯಿಸಿ ಲೂಟಿ ಮಾಡಿರುವ ಕುರಿತು ಸುಧೀರ್ಘ ತನಿಖೆ ಆಗಬೇಕು. ಸರಕಾರದ ಆಸ್ತಿಗಳನ್ನು, ಹಿಂದುಗಳ ಮಠಮಾನ್ಯಗಳ ಏಕ ಪಕ್ಷೀಯವಾಗಿ, ಕೊಟ್ಟ ದಾಖಲೆಗಳ ಸೃಷ್ಟಿ, ಮಾಡಿಕೊಂಡಿರುವದು ತನಿಖೆಯಾಗಲಿ ಎಂದು ಭಾರತೀಯ ಜನತಾ ಪಾರ್ಟಿ ಈ ಮೂಲಕ ಆಗ್ರಹಿಸುತ್ತದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ಹೊಸ ಕಾಯ್ದೆ ರೂಪಿಸುವ ಕ್ರಮ ಕೈಗೊಂಡಿದ್ದಾರೆ. ಜಂಟಿ ಸಂಸತ ಸಮಿತಿಯಲ್ಲಿ ಕಾಂಗ್ರೆಸ್ ಹಾಗೂ ಅವರ ಮಿತ್ರ ಪಕ್ಷಗಳು ಹೊಸ ಕಾಯ್ದೆಗೆ ಅಡ್ಡಿ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ ನಡೆಸುತ್ತಿರುವ ಹುನ್ನಾರಕ್ಕೆ ವಕ್ಫ ಬೋರ್ಡ್ ಕ್ರಮಗಳು ಕಂದಾಯ ದಾಖಲೆಗಳಲ್ಲಿ ಸೃಷ್ಟಿಸುತ್ತಿರುವ ಸಾಕ್ಷಿಗಳು ಹಿಂದೂ ವಿರೋಧಿ ರೈತ ವಿರೋಧಿ ಹುನ್ನಾರ ವಕ್ಫ ಬೋರ್ಡ್ ಮೂಲಕ ಮಾಡಿರುವ ಬೃಹತ್ ದಾಖಲೆಗಳ ಸೃಷ್ಟಿಯ ಎಲ್ಲಾ ವ್ಯವಹಾರಗಳನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು.

ಜಿಪಂ ಮಾಜಿ ಸದಸ್ಯ ಎಂ ಎಂ ಶಂಭೂಜಿ, ಮಲ್ಲಿಕಾರ್ಜುನ ಅಂಗಡಿ, ಬಸವರಾಜ್ ಉಮಚಗಿಮತ, ಹೋಳೆಬಸು ಬಾಳಶೆಟ್ಟಿ, ಮುತ್ತು ಬೋರ್ಜಿ, ಸಿದ್ದು ಮಾದರಿ ಇದ್ದರು.

# ಶಿಕ್ಷಕರ ಸಹಪಠ್ಯ ಚಟುವಟಿಕೆ ಆಶುಭಾಷಣ ಸ್ಪರ್ಧೆಯಲ್ಲಿ ಶಿಕ್ಷಕ ಎ. ಎಚ್. ಕೊಳಮಲಿ ಪ್ರಥಮ



**ವಿಜಯಪುರ :** ಜಿಲ್ಲಾ ಪಂಚಾಯತ್ ವಿಜಯಪುರ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ವಿಜಯಪುರ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಲಯ ನಗರ ವಲಯ ವಿಜಯಪುರ ವತಿಯಿಂದ ನಗರದ ಚೇತನಾ ಶಿಕ್ಷಣ ಸಂಸ್ಥೆ ಆವರಣದಲ್ಲಿ ನಡೆದ ತಾಲೂಕ ಮಟ್ಟದ ಶಿಕ್ಷಕರ ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸಿ, ಕನ್ನಡ ಆಶುಭಾಷಣ ಸ್ಪರ್ಧೆಯಲ್ಲಿ ಚೇತನಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಎ. ಎಚ್. ಕೊಳಮಲಿ ಪ್ರಥಮ ಸ್ಥಾನ ಪಡೆದುಕೊಂಡು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ದೇವಿಯ ದೇವಸ್ಥಾನದ ಲೋಕಾರ್ಪಣೆ ಅಂಗವಾಗಿ ಮಹಿಳೆಯರಿಂದ ಗಂಗಾ ಪೂಜೆ



**ಕೂಡ್ಲಿಗಿ :** ಪಟ್ಟಣದ ಶ್ರೀ ಊರಮ್ಮ ದೇವಿಯ ನೂತನ ದೇವಸ್ಥಾನ ಲೋಕಾರ್ಪಣೆ ಅಂಗವಾಗಿ ಮಂಗಳವಾರ ಗಂಗಾಪೂಜೆ ನೆರವೇರಿಸಲಾಯಿತು. ಬೆಳಿಗ್ಗೆ ಊರಮ್ಮ ದೇವಿಯ ಬಯಲಿನಿಂದ ಸಕಲ ವಾದ್ಯಗಳು ಹಾಗೂ ಕಳಸಾಗಳೊಂದಿಗೆ ಹೊರಟು ಊರಮ್ಮ ಬಾವಿಯನ್ನು ತಲುಪಲಾಯಿತು. ನಂತರ ಬಾವಿಯಲ್ಲಿ ಪುಣ್ಯಹಃ, ಕಂಕಣಧಾರಣೆ, ಅಗ್ರೋಧಕ ಪೂಜಾ, ಗಂಗಾಪೂಜೆ ನೆರವೇರಿಸಿ, ದೀಪಾರಾಧನೆ ಮಾಡಿ, ದೀಪವನ್ನು ಬಾವಿಯಲ್ಲಿ ತೇಲಿ ಬಿಡಲಾಯಿತು. ಈ ವೇಳೆ ನೆರದಿದ್ದ ಮುತ್ತೈದೆಯರಿಗೆ ಹುಡಿ ಕೊಡಲಾಯಿತು. ಗಂಗೆಯನ್ನು ಹೊತ್ತು ಕಳಸ ಕನ್ನಡಿ ಮತ್ತು ಮಂಗಳ ವಾದ್ಯಗಳೊಂದಿಗೆ ನೂತನ ದೇವಸ್ಥಾನಕ್ಕೆ ಬಂದು ಗೋ ಪೂಜೆ, ಅಂಕುರಾರ್ಪಣೆ ಮಾಡಿ, ಗಂಗೆಯನ್ನು ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಯಿತು. ಈ ಸಂದರ್ಭದಲ್ಲಿ ನೂರಾರು ಮಹಿಳೆಯರು ಗಂಗೆಗೆ ಕಳಸ ಬೆಳಗಿ ಭಕ್ತಿ ಸಮರ್ಪಿಸಿದರು. ಊರಿನ ಮಠಸ್ಥರು, ಜೋಹಿಸರು, ಗೌಡ್ರು, ಬಣಕಾರರು, ಶೆಟ್ರು, ತಳವಾರರು, ಗುರಿಕಾರರು, ಆರ್ಚಕರು ಸೇರಿದಂತೆ ಸಕಲ ಆಯಾಗಾರರು, ಊರಿನ ಹಿರಿಯ ಮುಖಂಡರು, ಪಟ್ಟಣ ಪಂಚಾಯ್ತಿ ಅಧ್ಯಕ್ಷ ಹಾಗೂ ಸರ್ವ ಸದಸ್ಯರು, ಸಕಲ ಭಕ್ತಾಧಿಗಳು ಸೇರಿ ವಿಜೃಂಭಣೆಯಿಂದ ಪೂಜಾ ಕಾರ್ಯಗಳನ್ನು ನೆರವೇರಿಸಲಾಯಿತು.

# ತಹಸೀಲ್ದಾರ್ ಕಚೇರಿಯಲ್ಲಿ ಒನಕೆ ಓಬವ್ವನ ಜಯಂತಿಯ ಪೂರ್ವಭಾವಿ ಸಭೆ



**ಕೂಡ್ಲಿಗಿ :** ಒನಕೆ ಓಬವ್ವ ಸ್ತ್ರೀ ಕುಲಕ್ಕೆ ಮಾದರಿ ಓಬವ್ವಳ ಜಯಂತಿ ಅರ್ಥಪೂರ್ಣವಾಗಿ ಜರುಗಬೇಕು ಎಂದು ಗ್ರೇಡ್ 2 ತಹಸೀಲ್ದಾರ್ ಎಂ.ವಿ.ನೇತ್ರಾವತಿ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಮಂಗಳವಾರ ತಾಲೂಕು ಆಡಳಿತದ ವತಿಯಿಂದ ಒನಕೆ ಓಬವ್ವ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ತಾಲೂಕಿನ ಗುಡೇಕೋಟೆ ಓಬವ್ವಳ ತವರೂರು ಆದ್ದರಿಂದ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಯಾವುದೇ ಒಂದು ಜನಾಂಗಕ್ಕೆ ಓಬವ್ವಳನ್ನು ಸೀಮಿತ ಮಾಡದೇ ಎಲ್ಲರೂ ಸೇರಿ ಆಚರಣೆ ಮಾಡಬೇಕು. ತಾಲೂಕಿನ 25 ಗ್ರಾಪಂ ಕಚೇರಿಗಳಲ್ಲಿ ಅಧ್ಯಕ್ಷ ಮತ್ತು ಸರ್ವ ಸದಸ್ಯರು ಒಳಗೊಂಡಂತೆ ಗ್ರಾಮಸ್ಥರನ್ನು ಕರೆಯಿಸಿ ಓಬವ್ವಳ ಜಯಂತಿ ಆಚರಣೆ ಮಾಡಬೇಕು ಎಂದು ಗ್ರೇಡ್ 2 ತಹಸೀಲ್ದಾರ್ ಎಂ.ವಿ.ನೇತ್ರಾವತಿ ತಾಪಂ ವ್ಯವಸ್ಥಾಪಕ ಅಶ್ವಥ್ ಕುಮಾರ್ ಗೆ ಸೂಚನೆ ನೀಡಿದರು.

ಅದರಂತೆ ಜಯಂತಿ ದಿನ ಎಲ್ಲಾ ಗ್ರಾಮಗಳಲ್ಲಿ ಶಾಲಾ ವಿಧ್ಯಾರ್ಥಿಗಳು ಓಬವ್ವಳ ಭಾವಚಿತ್ರ ಮೆರವಣಿಗೆ ಮಾಡಿ ಅವಳ ಸಾಹಸಗಾಥೆಯನ್ನು ವಿಧ್ಯಾರ್ಥಿಗಳಿಗೆ ತಿಳಿಸಬೇಕು ಎಂದು ಚಲವಾದಿ ಮಹಾಸಭಾದ ತಾಲೂಕು ಅಧ್ಯಕ್ಷ ಸಿ.ಮಾರಪ್ಪ ಸಭೆಯಲ್ಲಿ ತಿಳಿಸಿದರು. ಅದರಂತೆ ಪಟ್ಟಣದ ಪ್ರಮುಖ ವೃತ್ತಗಳಿಗೆ ಜಯಂತಿ ದಿನ ವಿದ್ಯುತ್ ಅಲಂಕಾರ ಮಾಡುವಂತೆ ಸಭೆಯಲ್ಲಿ ತಿಳಿಸಿದರು.

ಒನಕೆ ಓಬವ್ವ ಸಂಘದ ರಾಜ್ಯಾಧ್ಯಕ್ಷ ಹಿರೇಕುಂಬಳಗುಂಟೆ ಉಮೇಶ್ ಮಾತನಾಡಿ, ಜಯಂತಿಯನ್ನು ತಾಲೂಕು ಆಡಳಿತದ ವತಿಯಿಂದ ಅರ್ಥಪೂರ್ಣವಾಗಿ ಆಚರಣೆ ಮಾಡಿ,

ಗುಡೇಕೋಟೆ ಗ್ರಾಮದಲ್ಲಿ ಮುಂದಿನ ಫೆಬ್ರವರಿ ತಿಂಗಳಲ್ಲಿ ಗುಡೇಕೋಟೆ ಉತ್ಸವವನ್ನು ಅದ್ದೂರಿಯಾಗಿ ಆಚರಿಸಲು ಈಗಾಗಲೇ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಅವರು ಮಾತನಾಡಿದ್ದು, ಈ ಬಾರಿ ಸರ್ಕಾರದ ವತಿಯಿಂದ ಒನಕೆ ಓಬವ್ವಳ ತವರು ಗುಡೇಕೋಟೆಯಲ್ಲಿ ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಿದ್ದಾರೆ ಎಂದರು.

ಕರವೇ ಅಧ್ಯಕ್ಷ ಕಾಟೇರ ಹಾಲೇಶ್, ಮುಖಂಡರಾದ ಡಿ.ಬಿ.ಚಿತ್ತಪ್ಪ, ಕಟ್ಟೆ ಬಸಣ್ಣ, ಪಿಎಸ್ಐ ಸಿ.ಪ್ರಕಾಶ್, ಬಿಇಒ ಪದ್ಮನಾಭ ಕರಣಂ, ಪಪಂ ಮುಖ್ಯಾಧಿಕಾರಿ ಎಂ.ಕೆ.ಮುಗಳಿ, ಸಿ.ಕೊಟ್ರೇಶ್, ರೈತ ಸಂಘದ ದೇವರಮನೆ ಮಹೇಶ್, ಗಾಂಧಿ ಸ್ಮಾರಕ ಸಮಿತಿ ಅಧ್ಯಕ್ಷ ಡಿ.ನಾಗರಾಜ ಸೇರಿದಂತೆ ಅನೇಕರು ಇದ್ದರು.

# ಉಜ್ಜನಿಯಲ್ಲಿ ನಡೆದ ಕ್ರಿಕೇಟ್ ಟೂರ್ಲಿಮೆಂಟ್: ಬಿ.ಕೆ. ಬ್ರದರ್ಸ್ ದಾವಣಗೆರೆ ತಂಡ ಭರ್ಜರಿ ಗೆಲುವು



**ಕೊಟ್ಟೂರು :** ನವಂಬರ್ 5 : ನಗದು=20000/-ರೂ ಹಾಗೂ ಅತ್ಯಕರ್ಷಕ ಟ್ರೋಫಿ ಪ್ರಥಮ ಬಹುಮಾನ ವಿಜೇತೆ

ಕೊಟ್ಟೂರು ತಾಲೂಕು ಉಜ್ಜಯಿನಿ ಗ್ರಾಮದಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ 4ನೇ ವರ್ಷದ ಟೂರ್ಲಿಮೆಂಟ್ಸ್‌ನ್ನು ಉಜ್ಜಯಿನಿ ಬಾಯ್ಸ್ ತಂಡದವರು ಅಯೋಜಿಸಿದ್ದರು. ಕ್ರಿಕೇಟ್ ಟೂರ್ಲಿಮೆಂಟ್ಸ್‌ನ್ನು ಜ್ಞಾನಗುರು ವಿದ್ಯಾಪೀಠದ ಕಾರ್ಯದರ್ಶಿ ಎಂ.ಎಂ.ಜೆ. ಹರ್ಷವರ್ಧನ್ ಹಾಗೂ ಸರ್ ಎಂ. ಗುರುಸಿದ್ದನಗವಡ್ರು , ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಓಬಣ್ಣ ಸೇರಿ ಟೂರ್ಲಿಮೆಂಟ್ಸ್‌ಗೆ ಚಾಲನೆ ನೀಡಿದರು.

ಅಕ್ಟೋಬರ್ 31 ರಿಂದ ನವಂಬರ್ 3ರವರೆಗೆ ನಡೆಸಿರುವ ಕ್ರಿಕೆಟ ಟೂರ್ನಿಯಲ್ಲಿ ಒಟ್ಟು 30 ತಂಡಗಳು ಭಾಗವಹಿಸಿದ್ದವು ಅದರಲ್ಲಿ ಪ್ರಥಮ ಸ್ಥಾನವನ್ನು ಮುಡುಗೇರಿಸಿಕೊಂಡ ಬಿ.ಕೆ. ಬ್ರದರ್ಸ್ ದಾವಣಗೆರೆ. ಪ್ರಥಮ ಬಹುಮಾನವಾಗಿ ನಗದು=20000/-ರೂ ಹಾಗೂ ಅತ್ಯಕರ್ಷಕ ಟ್ರೋಫಿಯನ್ನು ನೀಡಿ ಗೌರವಿಸಲಾಯಿತು.

ಉಜ್ಜನಿ ಬಾಯ್ಸ್ ಉಜ್ಜನಿ. ತಂಡ ದ್ವಿತೀಯ ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತು ಅವರಿಗೂ ಕೂಡ ದ್ವಿತೀಯ ಬಹುಮಾನವಾಗಿ ನಗದು 10000/- ರೂ, ಆಕರ್ಷಕ ಟ್ರೋಫಿಯನ್ನು ತಮ್ಮ ಮುಡಿಗೇರಿಸಿಕೊಂಡರು.

ಸಮಾರೋಪ ಸಮಾರಂಭದಲ್ಲಿ. ಸಂದರ್ಭದಲ್ಲಿ ಶ್ರೀಯುತ ಪ್ರಕಾಶ್ ಶೆಟ್ಟಿ ಎಂ ಉಜಿನಪ್ಪ ವಿ ಲೋಕೇಶ್ ಬಿ ಹನುಮಂತಪ್ಪ, ಚನ್ನವೀರ ಸ್ವಾಮಿ ಶಿಕ್ಷಕರು, ಟಿ ಆರ್ ಏಕಾಂತರಾಜ್ ಶೆಟ್ಟಿ, ಡಾಕ್ಟರ್ ವೆಂಕಟೇಶ್, ಪ್ರಾಂಶುಪಾಲರಾದ ತಿಪ್ಪೇಸ್ವಾಮಿ ಸರ್, ಗೊಂಗಡಿ ಮಂಜುನಾಥ್ ಸ್ವಾಮಿ, ವಸುಂಧರ್ ಲೋಕಪ್ಪ, ಲೈಬ್ರರಿ ನಾಗರಾಜ್,ಗ್ರಾಮ ಪಂಚಾಯಿತಿ ಅಧ್ಯಕ್ಷರು ಓಬಣ್ಣ ಇನ್ನು ಅನೇಕ ಗಣ್ಯಾತಿ ಗಣ್ಯರು ಉಪಸ್ಥಿತರಿದ್ದರು.

ಈ ಒಂದು ಸಂದರ್ಭದಲ್ಲಿ ಉಜ್ಜನಿ ಬಾಯ್ಸ್ ಉಜ್ಜನಿ ತಂಡದವರು ಈ ಒಂದು ಕ್ರೀಡೆಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದತದ ಎಲ್ಲಾ ಕ್ರೀಡಾಭಿಮಾನಿಗಳಿಗೆ ಹಾಗೂ ಕ್ರೀಡಾ ಪ್ರೋತ್ಸಾಹಕರಿಗೆ ಸನ್ಮಾನ ಮಾಡಿ ಗೌರವಿಸಿದರು.

# ಸಂಡೂರಿನ ಸಂಪತ್ತಿನ ಮೇಲೆ ನಿಗಾ ಇಟ್ಟಿದ್ದಾರೆ, ಸಂಡೂರಿನ ಮತದಾರರು ಎಚ್ಚರಿಕೆ: ಮಾಜಿ ಸಂಸದ ಕೊಂಡಯ್ಯ

**ಬಳ್ಳಾರಿ :** ಸಂಡೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಬಹಳಷ್ಟು ಜನ ಅಲ್ಲಿನ ನೈಸರ್ಗಿಕ ಸಂಪತ್ತಿನ ಮೇಲೆ ಕಣ್ಣಿಟ್ಟು ಚುನಾವಣೆಗೆ ಬಂದಿದ್ದಾರೆ ಖಂಡಿತವಾಗಿ ನೀವು ಅವರನ್ನು ಸೋಲಿಸಿ ಸ್ಥಳೀಯರನ್ನೇ ಗೆಲ್ಲಿಸಿ ಎಂದು ಮಾಜಿ ಲೋಕಸಭಾ ಸದಸ್ಯ ಕೆಸಿ ಕೊಂಡಯ್ಯ ಸಂಡೂರಿನ ಮತದಾರರನ್ನು ಎಚ್ಚರಿಸಿದ್ದಾರೆ.

ಅವರು ಇಂದು ನಗರದ ಬಾಲಾ ಹೋಟೆಲ್ ನಲ್ಲಿ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿ 2004 ರಿಂದ 10 ರವರೆಗೆ ಬಳ್ಳಾರಿ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ನಡೆಸಿದವರು, ಗಣಿ ಸಂಪತ್ತನ್ನು ಲೂಟಿ ಮಾಡಿದವರೆಲ್ಲ ಬಿಜೆಪಿ ಅಭ್ಯರ್ಥಿ ಪರ ನಿಂತು ಪ್ರಚಾರ ಮಾಡಲು ಸಂಡೂರಿಗೆ ಬಂದಿದ್ದಾರೆ, ಅವರ ಉದ್ದೇಶ ಸಂಡೂರು ಮತ ಕ್ಷೇತ್ರ ಅಭಿವೃದ್ಧಿ ಮಾಡುವುದಾಗಿಲ್ಲ. ಅಲ್ಲಿನ ಅದಿರು ಸಂಪತ್ತು, ಮ್ಯಾಂಗನೀಸ್ ನ್ನು ಲೂಟಿ ಮಾಡುವುದಾಗಿದೆ ಎಂದು ಪರೋಕ್ಷವಾಗಿ ಜನಾರ್ದನರೆಡ್ಡಿ ವಿರುದ್ಧ ವಾಗ್ದಾಳಿ ನಡೆಸಿದರು.

ಅವರಿಗೆ ಮತ್ತೊಮ್ಮೆ ಗಣಿಗಾರಿಕೆ ಮೂಲಕ ಇಲ್ಲಿನ ಸಂಪತ್ತು ಲೂಟಿಗೆ ಸಂಡೂರಿನ ಮತದಾರರು ಅವಕಾಶ ಮಾಡಿಕೊಡ ಬಾರದು. ಸಂಡೂರಿನವರೇ ಆದ ಇ.ತುಕಾರಂ ಪತ್ನಿ ಅನ್ನಪೂರ್ಣ ಅವರನ್ನೇ ಗೆಲ್ಲಿಸುವ ಮೂಲಕ ಸಂಡೂರಿನ ಅಭಿವೃದ್ಧಿಗೆ ಬೆಂಬಲ ಕೊಡಿ ಎಂದು ಮನವಿ ಮಾಡಿದರು. ಸಂಡೂರು ಶಾಂತಿ ಮತ್ತು ಸಹಬಾಳಗೆ ಹೆಸರುವಾಸಿಯಾಗಿದೆ. ಹರಿ ಶಂಕರ ಕುಮಾರಸ್ವಾಮಿ ದೇವಸ್ಥಾನ ಸೇರಿದಂತೆ ಧಾರ್ಮಿಕವಾಗಿ ವಿಶ್ವವಿಖ್ಯಾತವೂ ಆಗಿದೆ. ಆದರೆ ಬಿಜೆಪಿಯವರಿಗೆ ಇಲ್ಲಿ ಅವಕಾಶ ಕೊಟ್ಟರೇ, ದೌರ್ಜನ್ಯ, ದಬ್ಬಾಳಿಕೆ ನಡೆಯಲಿದೆ. ಸಂಡೂರಿನಲ್ಲಿನ ಭಾವೈಕ್ಯತೆಗೆ ಧಕ್ಕೆಯಾಗಲಿದೆ ಕಾರಣ ಸಂಡೂರಿನ ಮತದಾರರು ಯಾವುದೇ ಕಾರಣಕ್ಕೂ ಬಿಜೆಪಿಗೆ ಮತ ನೀಡಬಾರದು ಎಂದು ಅವರು ಹೇಳಿದರು.

# ಕುಡುತಿನಿ ಬಿಜೆಪಿ ಕಾರ್ಯಕರ್ತರ ಪ್ರಚಾರಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಾಗ್ದಾಳಿ ವಕ್ಫ್ ಹೆಸರಿನಲ್ಲಿ ಕಾಂಗ್ರೆಸ್ ಸರ್ಕಾರ ರೈತರ ಜಮೀನುಗಳನ್ನು ಕಸಿದುಕೊಂಡು ರೈತರನ್ನು ವಂಚಿಸುತ್ತಿದೆ



**ಕುರುಗೋಡು :** ವಕ್ಫ್ ಹೆಸರಿನಲ್ಲಿ ಕಾಂಗ್ರೆಸ್ ಸರ್ಕಾರ ರೈತರ ಜಮೀನುಗಳನ್ನು ಕಸಿದುಕೊಂಡು ಅಮಾಯಕ ರೈತರನ್ನು ವಂಚಿಸುತ್ತಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿವೈ.ವಿಜಯೇಂದ್ರ ಅವರು ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿನಡೆಸಿದರು. ಅವರು ಸಮೀಪದ ಕುಡುತಿನಿ ಪಟ್ಟಣದ ಅಲ್ಲಂ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಸಂಡೂರುಕ್ಷೇತ್ರದ ಉಪಚುನಾವಣೆಯ ಬಿಜೆಪಿ ಅಭ್ಯರ್ಥೀ ಬಂಗಾರುಹನುಮಂತು ಅವರ ಪರವಾಗಿ ಪ್ರಚಾರಸಭೆಯಲ್ಲಿ ಮಾತನಾಡಿದ ಅವರು, ಯಡಿಯೂರಪ್ಪನವರು ಹೆಣ್ಣುಮಗು ಶಾಪವಲ್ಲ ಜೀವನದ ಭಾಗ್ಯಲಕ್ಷ್ಮೀ ಎಂದು "ಭಾಗ್ಯಲಕ್ಷ್ಮೀ ?ಮ0ಯೋಜನೆ" ತಂದರು. 18 ವರ್ಷತುಂಬಿದ ನಂತರಒ0ದು ಲಕ್ಷರೂಪಾಯಿ ಬಾಂಡ್ ಬರುವಂತೆ ವ್ಯವಸ್ಥೆ ಮಾಡಿದ್ದರು.ಈಗ ಕಾಂಗ್ರೆಸ್ ಸರ್ಕಾರ ಬಾಂಡ್‌ಅನ್ನು ನಿಲ್ಲಿಸುವ ಪ್ರಯತ್ನ ಮಾಡುತ್ತಿದೆ.

ಈ. ತುಕಾರಾಂ 4ಬಾರಿ ಶಾಸಕರಾಗಿದ್ದರು ಕ್ಷೇತ್ರದಲ್ಲಿ ಅಭಿವೃದ್ಧಿಯಾಗಿಲ್ಲ. ಸರಿಯಾದ ಶಾಲೆಗಳಿಲ್ಲ, ಆಸ್ಪತ್ರೆಗಳಿಲ್ಲ, ರಸ್ತೆಗಳಲ್ಲ. ಜಿಲ್ಲಾ ಖನಿಜ ನಿಧಿ ಮತ್ತು ಕಾರ್ಖಾನೆಗಳ ಸಿಎಸ್.ಆರ್. ಅನುದಾನ ಹೆಚ್ಚಾಗಿ ಸಿಗುತ್ತಿದ್ದರೂ ಅದು ಸಮರ್ಪಕವಾಗಿ ಬಳಕೆಯಾಗದೆ ಸಂಡೂರುಕ್ಷೇತ್ರದ ಅಭಿವೃದ್ಧಿಗೆ ಹಿನ್ನಡೆಯಾಗಿದೆ. ಬಿಜೆಪಿ ಸರ್ಕಾದಅವಧಿಯಲ್ಲಿ ಸಚಿವರಾಗಿದ್ದಜನಾರ್ದನರೆಡ್ಡಿ ಮತ್ತು ಶ್ರೀರಾಮುಲು ಇಬ್ಬರು ಬಳ್ಳಾರಿ ಜಿಲ್ಲೆಜೊತೆಗೆ ಸಂಡೂರುತಾಲೂಕನ್ನುಅಭಿವೃದ್ಧಿ ಮಾಡಿದ್ದಾರೆ. ಈ ಉಪಚುನಾವಣೆಯಲ್ಲಿ ಸಂಡೂರುಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತು ಅವರನ್ನು ಗೆಲ್ಲಿಸಿ ಹೊಸ ಇತಿಹಾಸ ಬರೆಯಬೇಕು ಎಂದು ನುಡಿದರು.

ಬಳ್ಳಾರಿಯ ಲೋಕಸಭೆಯಚುನಾವಣೆಯಲ್ಲಿ ಕಾಂಗ್ರೆಸ್ಗೆಲ್ಲಬೇಕೆ0ದು ವಾಲ್ಮೀಕಿ ನಿಗಮದ ಹಣವನ್ನು ದುರುಪಯೋಗಪಡಿಸಿಕೊಂಡು ಈಗ ಅವರೇ ಚುನಾವಣೆಯಲ್ಲಿ ಮತಕೇಳಲು ಬಂದಿದ್ದಾರೆ ಎಂದು ಟೀಕಿಸಿದರು.

ಮಾಜಿ ಸಚಿವ ಜನಾರ್ಧನರೆಡ್ಡಿ, ಬಿ. ಶ್ರೀರಾಮುಲು, ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತು, ಮಾಜಿ ಶಾಸಕ ಅನಿಲ್ ಲಾಡ್ ಮಾತನಾಡಿದರು.

ಮಾಜಿ ಶಾಸಕ ಸೋಮಶೇಖರ್‍ರೆಡ್ಡಿ, ಜೆಡಿಎಸ್ಜಿಲ್ಲಾಧ್ಯಕ್ಷ ಮೀನಳ್ಳೀತಾಯಣ್ಣ,

ಬಿಜೆಪಿ ಜಿಲ್ಲಾಧ್ಯಕ್ಷ ಅನೀಲ್ ನಾಯ್ದು, ಬುಡಾ ಮಾಜಿಅಧ್ಯಕ್ಷದಮ್ಮೂರು ಶೇಖರ್, ಜೆಡಿಎಸ್ ಶಾಸಕ ನೇಮಿರಾಜ ನಾಯ್ಕಾ, ಜಿಲ್ಲಾ ಉಪಾಧ್ಯಕ್ಷ ಜಿಟಿ.ಪೊಂಪಾಪತಿ, ಮಹಾಶಕ್ತಿ ಕೇಂದ್ರ ಅಧ್ಯಕ್ಷರು ಎಚ್.ಹನುಮೇಶ , ,ಮುಖ0ಡರಾದ ಕೆ.ಶ0ಕರಗೌಡ, ಪ.ಪಂ ಸದಸ್ಯರಾದಗೀತಾ ನಾಗರಾಜ, ಸಿ.ಡಿ.ದುಗ್ಗಪ್ಪ, ದೊಡ್ಡಬಸಪ್ಪ, ಕೆ.ಎಂ.ಹಾಲಪ್ಪ, ಕೋಟಿವೀರಾರೆಡ್ಡಿ, ಭಾಗ್ಯಮ್ಮ, ದೇವೇಂದ್ರಪ್ಪಅಲ್ಲಿಪುರಗಣೇಶ್, ಕಾಂದಾರಿಅಶೋಕ್, ಕೆ.ಪಂಪಾಪತಿ, ಗ್ಯಾಂಗಿ ಹನುಮಂತಪ್ಪ, ಪಿ.ವಿಶ್ವಾರಾಧ್ಯ, ಡಿ.ಸಿದ್ಧರಾಮ, ಮೃತ್ಯುಂಜಯ, ಇತರರಿದ್ದರು.

# ಅಳಿವಿನಂಚಿನಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆ: ದುರಸ್ತಿ ಕಾರ್ಯಕ್ಕೆ ಬೇಕಿದೆ ಸಹಾಯಹಸ್ತ






**ವರದಿ:ಲಾಲಸಾಬ ಸವಾರಗೋಳ**

**ವಿಜಯಪುರ** : ಜಿಲ್ಲೆಯ ನಿಡಗುಂದಿ ಪಟ್ಟಣದ ಹೃದಯ ಭಾಗದಲ್ಲಿರುವ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡಿ ಜೀವನ ಕಟ್ಟಿಕೊಂಡಿದ್ದು, ಸಮಾಜದಲ್ಲಿ ಉನ್ನತ ಸ್ಥಾನಕ್ಕೇರಿದ್ದಾರೆ. ಆದರೆ, ಈಗ ಅಳಿವಿನಂಚಿನಲ್ಲಿರುವ ಈ ಶಾಲೆಗೆ ಸಹಾಯದ ಹಸ್ತ ಬೇಕಿದೆ ಮತ್ತು ಶಿಕ್ಷಣ ಇಲಾಖೆ ಹಾಗೂ ಜಿಲ್ಲಾಡಳಿತ ಎಚ್ಚೆತ್ತುಕೊಳ್ಳಬೇಕಿದೆ.

1862ರ ಡಿಸೆಂಬರ್ 28ರಂದು ಮಾದರಿ ಶಾಲೆಯಾಗಿ ಪರಿವರ್ತನೆಯಾಗಿರುವ ಈ ಶಾಲೆಯ ಮೂರು ಕೊಠಡಿಗಳು ಕಟ್ಟಡ ಮೇಲ್ಛಾವಣಿ ಇಲ್ಲದೆ ಅವಸಾನದಂಚಿಗೆ ತಲುಪಿವೆ.

ವಿಜಯಪುರ ಜಿಲ್ಲೆಯ ನಿಡಗುಂದಿ ಪಟ್ಟಣ ತುಂಬಾ ವೇಗವಾಗಿ ಬೆಳೆಯುತ್ತಿದೆ. ಗ್ರಾಮದ ಹೊರವಲಯದಲ್ಲಿದ್ದ ಈ ಶಾಲೆ ಈಗ ಪಟ್ಟಣದ ಮದ್ಯಭಾಗವಾಗಿದೆ. ಇಲ್ಲಿ ಸೌಲಭ್ಯಗಳಿಗೇನೂ ಬರವಿಲ್ಲ. ಸದ್ಯ ಒಂದರಿಂದ ಏಳನೇ ತರಗತಿವರೆಗೆ ಒಟ್ಟು 134 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. 6 ಮಂದಿ ಶಿಕ್ಷಕರು ಒಬ್ಬರು ಅತಿಥಿ ಶಿಕ್ಷಕರಿದ್ದಾರೆ. 15 ಕೊಠಡಿಗಳಿವೆ. 8 ಕೊಠಡಿಗಳಲ್ಲಿ ತರಗತಿಗಳು ನಡೆಯುತ್ತಿದ್ದರೆ ಉಳಿದ 3ರಲ್ಲಿ ತಾಪಂ ಕಚೇರಿ, ಒಂದು ಗ್ರಂಥಾಲಯ, ಒಂದು ತಾಲೂಕು ಆಡಳಿತ ಕಚೇರಿಗೆ ಕೊಠಡಿಗಳು ಬಳಕೆಯಾಗುತ್ತಿವೆ.

**ಸಾವಿರ ಕಥೆಗಳಿವೆ:**

ಕಮಿಷನ್ ನಗರಾಡಳಿತ, ಮೈಸೂರು ಮಹಾರಾಜರ ಆಡಳಿತ, ಸ್ವಾತಂತ್ರ್ಯ ಹೋರಾಟ, ಸ್ವಾತಂತ್ರ್ಯೋತ್ತರ ಘಟನೆಗಳಿಗೆ ಸಾಕ್ಷಿಯಾಗುತ್ತ ತನ್ನ ಮಡಿಲಲ್ಲಿ ಮಕ್ಕಳನ್ನು ಕೂರಿಸಿಕೊಂಡು ಅಕ್ಷರ ಸೇವೆ ನಡೆಸುತ್ತ ಬಂದಿದ್ದ ಈ ಶಾಲೆಯ ಕುರಿತು ಸಾವಿರ ಕಥೆಗಳಿವೆ. ಶಿಸ್ತು ಕರ್ತವ್ಯ ನಿಷ್ಠೆ ಶಿಕ್ಷಣ ಪ್ರೇಮ, ಮಾನವೀಯ ಮೌಲ್ಯಗಳಿಗೆ ಹೆಸರಾದ ಅತ್ಯುತ್ತಮ ಶಿಕ್ಷಕರು ಇಲ್ಲಿ ಚಿರಸ್ಥಾಯಿಯಾಗಿದ್ದಾರೆ. ಐದಾರು ತಲೆಮಾರುಗಳಿಗೆ ಪಾಠ ಕಲಿಸಿದ್ದ ಕೀರ್ತಿ ಈ ಶಾಲೆಯ ಕಟ್ಟಡದ್ದಾಗಿದೆ.

"ಮೊದಲೆಲ್ಲ ಶಾಲೆಯನ್ನು ಉಳಿಸಿಕೊಳ್ಳಲು ಪಟ್ಟಣದ ಹಿರಿಯರು ಸಾಕಷ್ಟು ಶ್ರಮವಹಿಸಿದ್ದಾರೆ. ಪಟ್ಟಣವಲ್ಲದೆ ಸುತ್ತಮುತ್ತಲಿನ ಗ್ರಾಮದವರೂ ಕೂಡಾ ಇಲ್ಲಿಗೆ ವಿದ್ಯೆ ಹರಿಸಿ ಬರುತ್ತಿದ್ದರು. ಈ ಶಾಲೆಯ ಶಿಕ್ಷಣ ಕ್ರಾಂತಿಗೆ ನಾಂದಿ ಹಾಡಿದ್ದಲ್ಲದೆ ಪಟ್ಟಣದಲ್ಲಿ ಐಕ್ಯತೆ ಮೂಡಿಸಿದೆ" ಎನ್ನುತ್ತಾರೆ ಪಟ್ಟಣದ ಮುಖ್ಯಸ್ಥರು.

ಋಣ ಸಂದಾಯವಾಗಬೇಕಿದೆ: ಗ್ರಾಮವನ್ನು ಸುಶಿಕ್ಷಿತ ಪಟ್ಟಣವಾಗಿಸುವಲ್ಲಿ ಮೌನ ಶಿಕ್ಷಣ ಸೇವೆ ನಡೆಸಿಕೊಂಡು ಬಂದಿರುವ ಶಾಲೆಯನ್ನು ಉಳಿಸಿಬೆಳೆಸಬೇಕಿದೆ.ಹಳೆಯವಿದ್ಯಾರ್ಥಿಸಂಘ ಈ ಕಟ್ಟಡದೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿರುವ ಎಂಪಿಎಸ್ ಶಾಲೆಯಲ್ಲಿ ಕಲಿತ ಒಂದಿಷ್ಟು ಹಳೆಯ ವಿದ್ಯಾರ್ಥಿಗಳು ಶಾಲಾ ಕಟ್ಟಡವನ್ನು ಉಳಿಸಿಕೊಳ್ಳುವ ಸಲುವಾಗಿ ಸಂಘ ರಚಿಸಲು ಮುಂದಾಗಿದ್ದಾರೆ. ಈ ಕುರಿತು ಈಗಾಗಲೇ ಎರಡು ಮೂರು ಸಾರಿ ಸಭೆ ಸೇರಿ ಚರ್ಚಿಸಿದ್ದಾರೆ. ಅಂದಿನ ಮುಖ್ಯ ಗುರುಗಳ ಶಿಕ್ಷಕರ ಕೊಠಡಿ, ಅದರ ಅಕ್ಕಪಕ್ಕದ ಇನ್ನೆರಡು ಕೊಠಡಿಗಳನ್ನು ಜೀವನೋದ್ಧಾರ ಮಾಡಲು ರೂಪರೇಷೆ ಮಾಡಿಕೊಂಡಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ ವಸಂತ ರಾಥೋಡ ಮಾತನಾಡಿ, "ಇದು ನಮ್ಮ ಗಮನಕ್ಕೂ ಇದೆ. ಸಚಿವರಿಗೆ ಇದರ ಬಗ್ಗೆ ಮಾಹಿತಿ ನೀಡಿದ್ದೇವೆ. ನೆರವಿನ ಅಗತ್ಯವಿದೆ ಎಂದು ಮನವಿ ಸಲ್ಲಿಸಿದ್ದೇವೆ. ಸಚಿವರು ಉತ್ತಮ ಪ್ರತಿಕ್ರಿಯೆ ಕೊಟ್ಟಿದ್ದಾರೆ" ಎಂದರು.

## ಮಾರಾಪೂರ ನೂತನ ಪಿಕೆಪಿಎಸ್ ಅಧ್ಯಕ್ಷರಾಗಿ ಮಹಾದೇವ ಮಾರಾಪೂರ ಆಯ್ಕೆ



**ಮಹಾಲಿಂಗಪುರ:**ಸಮೀಪದ ಮಾರಾಪೂರ ಗ್ರಾಮದ ನೂತನ ಪಿಕೆಪಿಎಸ್ ಆಡಳಿತ ಮಂಡಳಿಯ ಪ್ರಥಮ ಅಧ್ಯಕ್ಷರಾಗಿ ಮಹಾದೇವ ಭೀಮಪ್ಪ ಮಾರಾಪೂರ, ಉಪಾಧ್ಯಕ್ಷರಾಗಿ ರಮೇಶ ವಿಠ್ಠಲ ಬೀಸನಕೊಪ್ಪ ಅವಿರೋಧ ಆಯ್ಕೆಯಾದರು. ಬುಧವಾರ ನಡೆದ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯಲ್ಲಿ ಪಿಕೆಪಿಎಸ್ ನೂತನ ಆಡಳಿತ ಮಂಡಳಿಯ ಅಧ್ಯಕ್ಷ ಉಪಾಧ್ಯಕ್ಷ ಸಾಮಾನ್ಯ ಸ್ಥಾನಗಳಿಗೆ ತಲಾ ಒಂದೊಂದೆ ನಾಮಪತ್ರಗಳು ಸಲ್ಲಿಕೆಯಾದ ಕಾರಣ ಮಾರಾಪೂರ ಗ್ರಾಮದ ನೂತನ ಪಿಕೆಪಿಎಸ್‌ನ ಅಧ್ಯಕ್ಷರಾಗಿ ಮಹಾದೇವ ಭೀಮಪ್ಪ ಮಾರಾಪೂರ, ಉಪಾಧ್ಯಕ್ಷರಾಗಿ ರಮೇಶ ವಿಠ್ಠಲ ಬೀಸನಕೊಪ್ಪ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ರಿಟರ್ನಿಂಗ್ ಆಫೀಸರ್ ಎಸ್.ಬಿ.ಚಿನಗುಂಡಿ ಘೋಷಿಸಿದರು.

ನೂತನ ಅಧ್ಯಕ್ಷ ಉಪಾಧ್ಯಕ್ಷರನ್ನು ಸರ್ವ ಸದಸ್ಯರು ಸನ್ಮಾನಿಸಿದರು. ಪಿಕೆಪಿಎಸ್ ಸದಸ್ಯರಾದ ಸತ್ಯಪ್ಪ ಮಾರುತಿ ಧರ್ಮಟ್ಟಿ, ಪ್ರಭು ಹಣಮಂತ ತಂಬೂರಿ, ಸಿದ್ದಪ್ಪ ಬಸವಣೆಪ್ಪ ಮೇಟಿ, ಬಾದಶಾ ಅಪ್ಪಾಸಾಬ ನಧಾಪ್, ಮಹಾದೇವ ನಾಗಪ್ಪ ಜಮಖಂಡಿ, ಶಾಂತಾ ವೆಂಕಪ್ಪ ಕೇದಾರಿ, ಪ್ರಭಾವತಿ ಮಹಾದೇವ ಮಾರಾಪೂರ, ಲಕ್ಷ್ಮಣ ಬಸಪ್ಪ ಮೇತ್ರಿ, ಸಿದ್ದಪ್ಪ ರಾಮಪ್ಪ ಕೊಣ್ಣೂರ ಸೇರಿದಂತೆ ಹಲವರು ಇದ್ದರು.

## ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘದ ಕಚೇರಿ ಉದ್ಘಾಟನೆ

### ನೇಕಾರನ ಎದೆಯಲ್ಲಿ ಒಗ್ಗಟ್ಟು, ಸ್ವಾಭಿಮಾನದ ಕಿಚ್ಚು ಹತ್ತಿದಾಗ ಮಾತ್ರ ಸಮಾಜದ ಅಭಿವೃದ್ಧಿ: ರವಿ ಜವಳಗಿ




**ಮಹಾಲಿಂಗಪುರ :** ನೇಕಾರನ ಎದೆಯಲ್ಲಿ ಒಗ್ಗಟ್ಟು, ಸ್ವಾಭಿಮಾನದ ಕಿಚ್ಚು ಹತ್ತಿದಾಗ ಮಾತ್ರ ನೇಕಾರ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ಪುರಸಭೆ ಸದಸ್ಯ ರವಿ ಜವಳಗಿ ಹೇಳಿದರು.

ಪಟ್ಟಣದ ಜಯಲಕ್ಷ್ಮೀ ನಗರದ ಶಿವಲಿಂಗ ಟಿರ್ಕಿ ಅವರ ಕರ್ನಾಟಕ ರಾಜ ನೇಕಾರ ಸೇವಾ ಸಂಘದ ಕಛೇರಿ ಉದ್ಘಾಟನೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಕೆಎಚ್‌ಡಿಸಿ ಕಛೇರಿಗೆ ಮಾತ್ರ ಸೀಮಿತವಾಗಿದ್ದ ನೇಕಾರ ಹೋರದ್ದಿಂದು ಸರ್ಕಾರಕ್ಕೆ ಹೋಗಿ ಮುಟ್ಟಿದೆ ಎಂದರೆ ಅದಕ್ಕೆ ನೇಕಾರ ಸೇವಾ ಸಂಘದ ಪರಿಶ್ರಮವೇ ಕಾರಣವಾಗಿದೆ. ನೇಕಾರರನ್ನು ಎಲ್ಲರೂ ತಮ್ಮ ಅವಶ್ಯಕತೆಗೆ ತಕ್ಕಂತೆ ಕೈ ಒರೆಸಿಕೊಳ್ಳುವ ಬಟ್ಟೆಯಂತೆ ಬಳಸಿಕೊಳ್ಳುತ್ತಿದ್ದಾರೆ. ನೇಕಾರರು ಸಹ ಉನ್ನತ ಹುದ್ದೆ, ರಾಜಕೀಯ ಸ್ಥಾನಮಾನಗಳನ್ನು ಪಡೆಯಲು, ಸಾಮಾಜಿಕ, ಆರ್ಥಿಕವಾಗಿ ಸಬಲತೆಯನ್ನು ಸಾಧಿಸಲು, ನಮ್ಮ ಹಕ್ಕುಗಳನ್ನು ಪಡೆಯಲು ನೇಕಾರ ಸಮಾಜಗಳಲ್ಲಿನ ಭಿನ್ನಾಭಿಪ್ರಾಯಗಳನ್ನು ಬಿಟ್ಟು ಎಲ್ಲರು ಒಗ್ಗಟ್ಟಿನ ಮಂತ್ರ ಜಪಿಸಬೇಕಾಗಿದೆ ಎಂದರು.

ಸಾನಿಧ್ಯವಹಿಸಿದ್ದ ರಬಕವಿಯ ಬ್ರಹ್ಮಾನಂದ ಮಠದ ಗುರುಸಿದ್ದೇಶ್ವರ ಸ್ವಾಮಿಜಿ ಮಾತನಾಡಿ ಕಟ್ಟ ಕಡೆಯ ನೇಕಾರನು ಆರ್ಥಿಕವಾಗಿ ಸಬಲತೆಯನ್ನು ಹೊಂದಲು ಔದ್ಯೋಗಿಕ ಶೈಕ್ಷಣಿಕವಾಗಿ ಮುಂದೆ ಬರಲು ಹೋರಾಟಗಳು ಮತ್ತು ಸಂಘಟನೆ ಬಹಳ ಅಗತ್ಯವಿದೆ. ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘವು ನೇಕಾರರನ್ನು ಸಂಘಟಿಸುತ್ತಾ ಸರ್ಕಾರದ ಮುಂದೆ ಜನಸಾಮಾನ್ಯರ ಸಮಸ್ಯೆಗಳ ಕುರಿತು ಚರ್ಚೆ ಮಾಡಿ, ಬೇಡಿಕೆಗಳ ಈಡೇರಿಕೆಯಲ್ಲಿ ಸಂಘವು ಮಹತ್ವದ ಪಾತ್ರವನ್ನು ವಹಿಸುತ್ತಿದೆ. ಕಚೇರಿಯ ಮೂಲಕ ರಾಜ್ಯದ ಎಲ್ಲ ಜಿಲ್ಲೆಗಳ ನೇಕಾರರಿಗೆ ಸೇವೆ ಸಿಗುವಂತಾಗಲಿ ಎಂದು ಶುಭ ಹಾರೈಸಿದರು.


ಜಿಪಂ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ ಮಾತನಾಡಿ ನೇಕಾರ ಸೇವಾ ಸಂಘದ ರಾಜ್ಯಾಧ್ಯಕ್ಷ ಶಿವಲಿಂಗ ಟಿರಕಿ ಅವರು ಅಸಂಘದ ಹೋರಾಟ ನಮ್ಮದೇ ಬುತ್ತಿ ನಮ್ಮದೇ ಬಸ್ ಚಾರ್ಜ್ ನಮ್ಮ ಹಕ್ಕುಗಳಿಗಾಗಿ ಹೋರಾಟ ಎನ್ನುವ ಧ್ಯೇಯದೊಂದಿಗೆ ನೇಕಾರರನ್ನು ಸಂಘಟಿಸಿ ಸಾಕಷ್ಟು ಹೋರಾಟಗಳ ಮೂಲಕ ರಾಜ್ಯದ ಕಟ್ಟಕಡೆಯ ವೃತ್ತಿಪರ ನೇಕಾರರಿಗೆ ನ್ಯಾಯವನ್ನು ಒದಗಿಸಲು ಪ್ರಯತ್ನ ಮಾಡುತ್ತಿದ್ದಾರೆ. ರಾಜ್ಯದ ಸಮಸ್ತ ನೇಕಾರರು ಕೈಜೋಡಿಸಿ ಯೋಜನೆಗಳನ್ನು ಪಡೆದುಕೊಳ್ಳಬೇಕು ಎಂದರು.

ಚಿಮ್ಮಡ ವಿರಕ್ತಮಠದ ಪ್ರಭುಸ್ವಾಮಿಜಿ ಮಾತನಾಡಿ ರೈತ ಮತ್ತು ನೇಕಾರರು ಈ ರಾಜ್ಯದಲ್ಲಿ ಹೋರಾಟ ಮಾಡದೆ ಏನನ್ನು ಪಡೆದುಕೊಳ್ಳಲಾಗದಿರುವ ಪರಿಸ್ಥಿತಿ ಇವತ್ತು ಬಂದಿದೆ. ಸರ್ಕಾರಗಳು ನೇಕಾರ ಮತ್ತು ರೈತರನ್ನು ಇವರ ಹೋರಾಟಗಳನ್ನು ಗೌರವಿಸಿ ಇವರ ಕುಂದು ಕೊರತೆಗಳನ್ನು ನೀಗಿಸಬೇಕು ಎಂದರು.

ಪುರಸಭೆ ಸದಸ್ಯರಾದ ಪ್ರಲ್ಹಾದ್ ಸಣ್ಣಕ್ಕಿ, ರಾಜು ಜಮಕೇರಿ, ಬಸವರಾಜ್ ಹಿಟ್ಟಿನಮಠ, ಕಾನಿಪ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ, ಸಂಗಪ್ಪ ಉದಗಟ್ಟಿ, ಅರ್ಜುನ ಕುಂಬಾರ, ಲಕ್ಷ್ಮಣ ಡೋಣಿವಾಡಿ, ಶ್ರೀಶೈಲ್ ಮುಗಳಳ್ಳಿ, ಓಂ ಬಾಗೇವಾಡಿ, ಭೀಮರಾವ್ ಖೋತ, ವಿರುಪಾಕ್ಷ ಕಾಗಿ, ರಾಘು ಬೆಳಗಲಿ, ರಮೇಶ್ ಹತ್ತಿಕಾಳ, ಬಸವರಾಜ್ ಕರಿ, ರಾಜು ದಡಿ, ಮಾಧುಸಾ ಮೆಹರವಾಡೆ ಸೇರಿದಂತೆ ರಬಕವಿ–ಬನಹಟ್ಟಿ, ದೋಣಿವಾಡಿ, ಮಾಣಕಾಪುರ, ಗೋಕಾಕ್, ಗದಗ್–ಬೆಟಗೇರಿ, ಹೊಸೂರ, ರಾಂಪುರ, ಹುಲ್ಯಾಳ ಸೇರಿದಂತೆ ವಿವಿಧ ಭಾಗದಲ್ಲಿ ನೂರಾರು ನೇಕಾರರು ಭಾಗವಹಿಸಿದ್ದರು

ನಂತರ ನಡೆದ ದುಂಡುಮೇಜಿನ ಸಭೆಯಲ್ಲಿ ಡಿಸೆಂಬರ್ 10 ರಂದು ಬೆಳಗಾವಿ ಚಲೋ ಹೋರಾಟ ಹಾಗೂ ಬೃಹತ್ ಪ್ರತಿಭಟನೆಯನ್ನು ಕೈಗೊಳ್ಳಲು ನಿರ್ಣಯಿಸಲಾಯಿತು. ರಾಜೇಂದ್ರ ಮಿರ್ಜಿ ಸ್ವಾಗತಿಸಿ–ನಿರೂಪಿಸಿದರು. ಸೋಮು ಮರೆಗುದ್ದಿ ವಂದಿಸಿದರು.

## ದೀಪಾವಳಿ ಕಡೆಪಾಡ್ಯೆ ನಿಮಿತ್ತ ಪ್ರಭುದೇವರ ಪಲ್ಲಕ್ಕಿ ಉತ್ಸವ



**ತೇರದಾಳ :** ಬೆಳಕಿನ ಹಬ್ಬ ದೀಪಾವಳಿ ಕಡೆಪಾಡ್ಯೆ ನಿಮಿತ್ತ ಬುಧವಾರ ಪಟ್ಟಣದ ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ಪಲ್ಲಕ್ಕಿ ಹಾಗೂ ನಂದಿಕೋಲು ಉತ್ಸವ ಸಂಭ್ರಮ ಸಡಗರದಿಂದಜರುಗಿತು.

ಹಬ್ಬದ ನಿಮಿತ್ತ ನಸುಕಿನ ಜಾವ ಪ್ರಭುದೇವರ ಗದ್ದುಗೆಗೆ ರುದ್ರಾಭಿಷೇಕ, ಅಲಂಕಾರಿತ ಪೂಜೆ, ಉದು ನೀಡುವುದು, ಮಂಗಳಾರುತಿ ಸೇರಿದಂತೆ ಹಲವು ಧಾರ್ಮಿಕ ಕಾರ್ಯಕ್ರಮಗಳು ಅರ್ಚಕ ಪರಯ್ಯ ಮೇಲಿನಮನಿ ಅವರಿಂದ ನಡೆದವು. ಬಳಿಕ ಸಂಪ್ರದಾಯದಂತೆ ನಾಡಗೌಡರ ಮನೆಯಿಂದ ಆರುತಿ ಬಂದ ಬಳಿಕ ವಿಶೇಷ ಪೂಜೆ ನಡೆಸಿ ಪಲ್ಲಕ್ಕಿ ಹಾಗೂ ನಂದಿಕೋಲು ಉತ್ಸವಕ್ಕೆ ಚಾಲನೆ ನೀಡಲಾಯಿತು. ದೇವಸ್ಥಾನದಿಂದ ಹೊರಟ ಉತ್ಸವ ಸಿದ್ದೇಶ್ವರ ಗಲ್ಲಿ, ಜವಳಿ ಬಜಾರ, ಕನ್ನಡ ಶಾಲೆ, ದ್ವಾರ ಬಾಗಿಲು, ಎಸ್‌ಬಿಐ ಮುಖಾಂತರ ತೆರಳಿ ದೇಸಾರ ಬಾವಿ ತಲುಪಿತು. ಅಲ್ಲಿ ಸುಮಾರು ಎರಡು ಗಂಟೆಗೂ ಅಧಿಕ ಕಾಲ ನೂರಾರು ಭಕ್ತರಿಂದ ಸಾಮೂಹಿಕವಾಗಿ ಅಭಿಷೇಕ ಜರುಗಿತು. ಉತ್ಸವದ ದಾರಿಯುದ್ದಕ್ಕೂ ಭಕ್ತರು ವಚನ ಗೀತೆಗಳನ್ನು ಹಾಡಿದರು. ಬಣ್ಣ ಬಣ್ಣದ ರಂಗೋಲಿ ಉತ್ಸವಕ್ಕೆ ಸ್ವಾಗತ ಕೋರಿದವು. ವಾಧ್ಯಮೇಳಗಳು ಕಳೆ ಕಟ್ಟಿದವು. ದೇಸಾರ ಬಾವಿಯಲ್ಲಿ ಸಾಮೂಹಿಕಭಿಷೇಕ ಮುಗಿಗಿಯುವ ವರೆಗೆ ಭಕ್ತರು ಉಪವಾಸ ಇರುವುದು ವಾಡಿಕೆ.

## ನಾವಲಗಿಯ ಸೈಕ್ಲಿಂಗ್ ಪ್ರತಿಭೆ ರಾಷ್ಟ್ರ ಮಟ್ಟಕ್ಕೆ ಆಯ್ಕೆ





**ರಬಕವಿ–ಬನಹಟ್ಟಿ :** ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ ತಾಲೂಕಿನ ನಾವಲಗಿ ಗ್ರಾಮ ಕಲೆ, ಸಾಂಸ್ಕೃತಿಕ ಗ್ರಾಮವಾಗಿದೆ. ಜೊತೆಗೆ ಕ್ರೀಡೆಯಲ್ಲಿಯೂ ಕೂಡಾ ತನ್ನದೇ ಆದ ಹೆಸರನ್ನು ಮಾಡಿದೆ.

ನಾವಲಗಿ ಗ್ರಾಮದ ಸೈಕ್ಲಿಸ್ಟ್ ದಾನಮ್ಮ ಕಲ್ಲಪ್ಪ ಗುರವ ತಮ್ಮ ಸಹೋದರನ ಹಾದಿಯಲ್ಲಿ ಸೈಕ್ಲಿಂಗ್ ಕ್ರೀಡೆಗೆ ಆಸಕ್ತಿ ವಹಿಸಿ ಇತ್ತೀಚೆಗೆ ಮೈಸೂರಿನಲ್ಲಿ ನಡೆದ ರಾಜ್ಯಮಟ್ಟದ ಸೀನಿಯರ್ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನ ಪಡೆದು ಒರಿಸ್ಸಾದಲ್ಲಿ ನಡೆಯುವ ರಾಷ್ಟ್ರಮಟ್ಟದ ಸೈಕ್ಲಿಂಗ್ ಸ್ಪರ್ಧೆಗೆ ಆಯ್ಕೆಯಾಗುವ ಮೂಲಕ ಸಾಧನೆ ಮಾಡಿದ್ದಾಳೆ. ಇವಳ ಸಾಧನೆಗೆ ಸಹೋದರ ಮುಚಖಂಡೆಪ್ಪ ಗುರವ ಸ್ಫೂರ್ತಿಯಾಗಿದ್ದು ಸದ್ಯ ಇವರು ಆರ್ಮಿಯಲ್ಲಿ ಸೈನಿಕರಾಗಿ ಸೇವೆ ಸಲ್ಲಿಸುತ್ತಿದ್ದು, ತಂಗಿಯ ಸೈಕ್ಲಿಂಗ್ ಕ್ರೀಡೆಗೆ ಪ್ರೋತ್ಸಾಹಿಸುವ ಮೂಲಕ ಬೆನ್ನು ತಟ್ಟುತ್ತಿದ್ದಾರೆ. ಕುಮಾರಿ ದಾನಮ್ಮ ಗುರವ ಮದ್ಯಮ ಕುಟುಂಬದ ಪ್ರತಿಭೆಯಾಗಿದ್ದು ಸೈಕ್ಲಿಂಗ್ ನಲ್ಲಿ ಸಾಧನೆ ಮಾಡುವ ಮೂಲಕ ಗ್ರಾಮಕ್ಕೆ ಕೀರ್ತಿ ತಂದಿದ್ದಾರೆ. ಇವರು ರಾಜ್ಯ ಹಾಗೂ ರಾಷ್ಟ್ರಮಟ್ಟದ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ಉತ್ತಮ ಸ್ಥಾನಗಳನ್ನು ಪಡೆದಿದ್ದಾರೆ. ಇವರು ಪುಣೆಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಎಂಟಿಬಿ ಜೂನಿಯರ್ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದು ಬಂಗಾರದ ಪದಕ ತಮ್ಮದಾಗಿಸಿಕೊಂಡಿದ್ದಾರೆ. ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್ ಶಿಪ್ ನಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆಯವ ಮೂಲಕ ಬಂಗಾರದ ಪದಕ, ಜಮಖಂಡಿಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ರೋಡ್ ಸೈಕ್ಲಿಂಗ್ ಚಾಂಪಿಯನ್ ಶಿಪ್ ನಲ್ಲಿ ಪ್ರಥಮ ಸ್ಥಾನದೊಂದಿಗೆ ಬಂಗಾರ ಪದಕ, ಕೇರಳದಲ್ಲಿ ನಡೆದ ಟ್ರ್ಯಾಕ್ ಸೈಕ್ಲಿಂಗ್ ನಲ್ಲಿ ಪ್ರಥಮ ಸ್ಥಾನ, ಉತ್ತರಖಂಡ ಎಂಟಿಬಿ ರಾಷ್ಟ್ರೀಯ ಮಟ್ಟದ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನ, ಹುಬ್ಬಳ್ಳಿ ಹಾಗೂ ಕುಮಟಗಿಯಲ್ಲಿ ನಡೆದ ರಾಜ್ಯಮಟ್ಟದ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಸಾಧನೆ ಮಾಡಿದ್ದಾಳೆ.

ಸೈಕ್ಲಿಂಗ್ ನಲ್ಲಿ ಸಾಧನೆ ಮಾಡಿರುವ ದಾನಮ್ಮಳು ಪದವಿ ಶಿಕ್ಷಣವನ್ನು ಮುಗಿಸಿದ್ದು, ಸದ್ಯ ವಿಜಯಪುರದಲ್ಲಿ ಪ್ರ್ಯಾಕ್ಟಿಸ್ ಮಾಡುತ್ತಿದ್ದಾರೆ. ಇಂತಹ ಗ್ರಾಮೀಣ ಭಾಗದ ಹೆಣ್ಣು ಮಕ್ಕಳು ಕೂಡಾ ಸೈಕ್ಲಿಂಗ್ ಕ್ರೀಡೆಯಲ್ಲಿ ಸಾಧನೆ ಮಾಡಲು ಸದಾ ಪ್ರೋತ್ಸಾಹಿಸುತ್ತಿರುವ ಗ್ರಾಮದ ಲಕ್ಷ್ಮಣ ಹೂಗಾರ ಅವರ ಪರಿಶ್ರಮದ ಫಲದಿಂದ ಗ್ರಾಮದ ಪ್ರತಿಭೆಗಳು ಸೈಕ್ಲಿಂಗ್ ನಲ್ಲಿ ರಾಷ್ಟ್ರಮಟ್ಟದಲ್ಲಿ ಮಿಂಚಲು ಸಹಕಾರಿಯಾಗಿದೆ.

# ಪುರಸಭೆ ಸಾಮಾನ್ಯ ಸಭೆ: ಪಟ್ಟಣದ ವಿವಿಧ ಭಾಗಗಳಲ್ಲಿನ ಅನಧಿಕೃತ ಶೆಡ್‌ಗಳ ತೆರವಿಗೆ ನಿರ್ಧಾರ



**ಮಹಾಲಿಂಗಪುರ :** ಕಾಮಗಾರಿ ಪ್ರಗತಿಯಲ್ಲಿರುವ ಬಸವ ವೃತ್ತದಿಂದ ಎಪಿಎಂಸಿ ದ್ವಾರ ಬಾಗಿಲುವರೆಗಿನ ರಸ್ತೆಯ ಪಶ್ಚಿಮ ಭಾಗದಲ್ಲಿನ ಅನಧಿಕೃತ ಕಟ್ಟಡ ತೆರವುಗೊಳಿಸಿ ಚರಂಡಿ ನಿರ್ಮಾಣ, ಚನ್ನಮ್ಮ ವೃತ್ತದಿಂದ ರಬಕವಿ ರಸ್ತೆಯ ದ್ವಾರ ಬಾಗಿಲು, ಗೋಕಾಕ ರಸ್ತೆಯ ಸರ್ಕಾರಿ ಕಾಲೇಜಿನ ರಸ್ತೆಯಲ್ಲಿರುವ ಹಾಗೂ ಡಬಲರಸ್ತೆಯ ಸಜನಸಾಬ ಪೆಂಡಾರಿ ಅಡ್ಡೆಯಿಂದ ಸಣ್ಣಕ್ಕಿ ಅಡ್ಡೆವರೆಗಿನ ಅತಿಕ್ರಮಣ ಒಳ ರಸ್ತೆಗಳಲ್ಲಿನ ಎಲ್ಲಾ ಶೆಡ್‌ಗಳನ್ನು ತೆರವುಗೊಳಿಸಲು ಸರ್ವಾನುಮತದ ಠರಾವು ಪಾಸ ಮಾಡಲಾಯಿತು.

ಸೋಮವಾರ ಪುರಸಭೆಯ ಸಭಾಭವನದಲ್ಲಿ ಅಧ್ಯಕ್ಷ ಯಲ್ಲನಗೌಡ ಪಾಟೀಲ್ ಅಧ್ಯಕ್ಷತೆಯಲ್ಲಿ ಜರುಗಿದ ಸಾಮಾನ್ಯ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಪುರಸಭೆ ಸದಸ್ಯ ಪ್ರಲ್ಹಾದ ಸಣ್ಣಕ್ಕಿ ಮಾತನಾಡಿ ಕರಕುಶಲಕಾರ್ಮಿಕರಿಗೆವಸತಿಯೋಜನೆಯಲ್ಲಿ ನೇಕಾರರಿಗೆ ಮಂಜೂರಿಯಾದ 100 ಮನೆಗಳ ಫಲಾನುಭವಿಗಳ ಆಯ್ಕೆಯಲ್ಲಿ ತೇರದಾಳ ಶಾಸಕರು ಮತ್ತು ಶಾಸಕರು ಬೆಂಬಲಿಗರು ಲಂಚಪಡೆದು ನೇಕಾರರು ಅಲ್ಲದ ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ, ನೇಕಾರರಿಗೆ ಅನ್ಯಾಯ ಮಾಡಲಾಗಿದೆ. ತಕ್ಷಣ ಆಯ್ಕೆ ಪಟ್ಟಿಯನ್ನು ರದ್ದುಗೊಳಿಸಿ ಅರ್ಹ ನೇಕಾರ ಫಲಾನುಭವಿಗಳನ್ನು ಆಯ್ಕೆ ಮಾಡಿದ ನಂತರವೇ ಮನೆ ನಿರ್ಮಾಣದ ಕಾಮಗಾರಿ ಆದೇಶಪತ್ರಗಳನ್ನು ವಿತರಿಸಬೇಕೆಂದು ಆಗ್ರಹಿಸಿದರು.

ಚನ್ನಮ್ಮ ಸರ್ಕಲ್, ಡಬಲ್ ರಸ್ತೆಯ ವಾರದ ಸಂತೆ ಮಾರುಕಟ್ಟೆ ಸರ್ಕಲ್‌ನಲ್ಲಿ ಇರುವ ಅನಧಿಕೃತ ಶೆಡ್‌ಗಳ ತೆರವುಗೊಳಿಸಿ ವಾಣಿಜ್ಯ ಮಳಿಗೆ ನಿರ್ಮಾಣ ಹಾಗೂ ಮಹಾಲಿಂಗೇಶ್ವರ ದೇವಸ್ಥಾನದಿಂದ ಬಡಲ್ ರಸ್ತೆವರೆಗಿನ ಅತಿಕ್ರಮಣ ಅಂಗಡಿಗಳನ್ನು ತೆರವುಗೊಳಿಸಿ ಡಬಲ್ ರಸ್ತೆ ನಿರ್ಮಾಣ ಮಾಡಲು ಠರಾವು ಪಾಸ ಮಾಡಲಾಯಿತು. ಇದಕ್ಕೆ ಸದಸ್ಯರಾದ ಬಸವರಾಜ ಚಮಕೇರಿ, ಬಸವರಾಜ ಹಿಟ್ಟಿನಮಠ ಈಗಾಗಲೇ ಇಲ್ಲಿನ ವ್ಯಾಪಾರ ವಹಿವಾಟು ಕುಸಿದಿದೆ. ಇದರಿಂದ ಜನಾಕ್ರೋಶಕ್ಕೆ ಕಾರಣವಾಗುತ್ತದೆ ಎಂದು ವಿರೋಧ ವ್ಯಕ್ತಪಡಿಸಿದರು.

ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಮುಖ್ಯಾಧಿಕಾರಿ ಈರಣ್ಣ ದಡ್ಡಿ ಮಾತನಾಡಿ ಸರ್ವೇ ಮಾಡಿಸಿ ಪುರಸಭೆಯ ಅತಿಕ್ರಮಣ ಜಾಗೆಗಳನ್ನುಮಾತ್ರತೆರವುಗೊಳಿಸಲಾಗುವದು. ಮಾಲೀಕತ್ವದ ಯಾವುದೇ ಜಾಗೆಯನ್ನು ನಾವು ಅತಿಕ್ರಮಣ ಮಾಡುವದಿಲ್ಲ. ಈ ಡಬಲ್ ರಸ್ತೆಯ ನಿರ್ಮಾಣದಿಂದ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಹಾಗೂ ಪಟ್ಟಣದ ಸೌಂದರ್ಯವು ಹೆಚ್ಚಲಿದೆ ಜೊತೆಗೆ ಟ್ರಾಫಿಕ್ ಸಮಸ್ಯೆಯ ನಿವಾರಣೆಯು ಆಗಲಿದೆ. ಪಟ್ಟಣದ ಸಾರ್ವಜನಿಕರು ಇದಕ್ಕೆ ಸಹಕಾರ ನೀಡಬೇಕು ಎಂದರು.

**ವಿವಿಧ ವೃತ್ತಗಳ ನಿರ್ಮಾಣಕ್ಕೆ ಅಸ್ತು :**

ಪಟ್ಟಣದ ಬುದ್ನಿಪಿಡಿಯಲ್ಲಿ ಸಂಗೋಳ್ಳಿ ರಾಯಣ್ಣ ವೃತ್ತ, ಹೇಮರಡ್ಡಿ ಮಲ್ಲಮ್ಮ ವೃತ್ತ, ರಬಕವಿ ರಸ್ತೆಯ ಶಾಂತಿನಿಕೇತನ ಕಾಲನಿಯ ಶಂಕರ ಅಂಬಿ ಮನೆಯ ಹತ್ತಿರ ಆದ್ಯ ವಚನಕಾರ ದೇವರ ದಾಸಿಮಯ್ಯ ವೃತ್ತಗಳ ನಿರ್ಮಾಣಕ್ಕೆ ಸರ್ವಾನುಮತದ ಒಪ್ಪಿಗೆ ನೀಡಲಾಯಿತು.

**80 ಲಕ್ಷ ವೆಚ್ಚದ ವಾಣಿಜ್ಯ ಮಳಿಗೆ ನಿರ್ಮಾಣ :**

ವಾರದ ಮಾರುಕಟ್ಟೆ ಪಶ್ಚಿಮ ಭಾಗದಲ್ಲಿನ ಅನಧಿಕೃತಶೆಡ್ ತೆರವುಗೊಳಿಸಿ ಪುರಸಭೆಯ ಉದ್ಯಮ ನಿಧಿಯಲ್ಲಿ 80 ವೆಚ್ಚದಲ್ಲಿ ವಾಣಿಜ್ಯ ಮಳಿಗೆ ನಿರ್ಮಾಣಕ್ಕೆ ಸರ್ವಾನುಮತದ ಠರಾವು ಪಾಸ ಮಾಡಲಾಯಿತು.

ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ಹಿಟ್ಟಿನಮಠ,

ಸದಸ್ಯ ರವಿ ಜವಳಗಿ ಮಾತನಾಡಿ ಡಬಲ್ ರಸ್ತೆಯ ವೃತ್ತಕ್ಕೆ ಅರ್ಜುನಗೌಡ ಪಾಟೀಲ ಅವರು ಅಧ್ಯಕ್ಷತೆಯ ಅವಧಿಯಲ್ಲಿ ಸ್ವಾಮಿ ವಿವೇಕಾನಂದ ವೃತ್ತ ಎಂದು ನಾಮಕರಣ ಮಾಡಿ ಠರಾವು ಪಾಸ ಮಾಡಲಾಗಿದೆ. ಈಗ ಮತ್ತೇ ಪುರಸಭೆಯ ಸಾಮಾನ್ಯ ಸಭೆಯ ಸೂಚನಾಪತ್ರದಲ್ಲಿ ಪೆಂಡಾರಿ ಸರ್ಕಲ್ ಎಂದು ಬಳಸಿದನ್ನು ಖಂಡಿಸಿ, ಹಿಂದಿನ ಠರಾವಿನಂತೆ ಸ್ವಾಮಿ ವಿವೇಕಾನಂದ ವೃತ್ತ ಎಂದು ನಮೂದಿಸಲು ಒತ್ತಾಯಿಸಿದರು.

ಸದಸ್ಯೆ ಸರಸ್ವತಿ ರಾಮೋಜಿ ಮಾತನಾಡಿ ಕೆಂಗೇರಿಮಡ್ಡಿಯಲ್ಲಿ ರಾಜಕೀಯ ದ್ವೇಶದಿಂದ ಉಳಿಸಿರುವ 350ಕ್ಕೂ ಅಧಿಕ ಫಲಾನುಭವಿಗಳಿಗೆ 94ಸಿಸಿ ಯೋಜನೆಯಲ್ಲಿ ನಿವೇಶನ ಮಂಜೂರಾತಿ ಪತ್ರಗಳನ್ನು ನೀಡಿ, ಬಡವರು ಸ್ವಂತ ಸೂರು ಹೊಂದಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

**ಅನಧಿಕೃತ ಅಂಗಡಿ ಮತ್ತು ಕಟ್ಟಡ ತೆರವಿಗಾಗಿ ಮನವಿ:**

**ವೆಂಕನಗೌಡ ದಶರಥಗೌಡ ಪಾಟೀಲ ಎಂಬುವವರು ಪಟ್ಟಣದ ಸರ್ಕಾರಿ ಹೈಸ್ಕೂಲ್, ಪಿಯು ಕಾಲೇಜು, ಹಾಸ್ಟೇಲ್, ಕೌಜಲಗಿ ನಿಂಗಮ್ಮ ಭವನಕ್ಕೆ ಹೋಗುವ ದಾರಿಯಲ್ಲಿ ಅನಧಿಕೃತವಾಗಿರುವ ಶೇಖರ ಆಯಿಲ್ ಸೆಂಟರ್ ಹಾಗೂ ಹಳ್ಳದ ಮೇಲೆ ಕಟ್ಟಿರುವ ಶಿವಾನಂದ ಅಂಗಡಿ ಅವರ ಅತಿಕ್ರಮಣ ಅಂಗಡಿಗಳನ್ನು ತೆರವುಗೊಳಿಸಬೇಕೆಂದು ಪುರಸಭೆ ಅಧ್ಯಕ್ಷರು, ಮುಖ್ಯಾಧಿಕಾರಿಗಳು, ಹಲವು ಸದಸ್ಯರಿಗೆ ಮನವಿ ಪತ್ರಗಳನ್ನು ನೀಡಿ ಒತ್ತಾಯಿಸಿದರು.**

ಸದಸ್ಯರಾದ ಬಲವಂತಗೌಡ ಪಾಟೀಲ, ಮುಸ್ತಾಕ ಚಿಕ್ಕೋಡಿ, ಚಾಂದನಿ ನಾಯಕ್, ಡಾ.ಸವಿತಾ ಕೋಳಿಗುಡ್ಡ, ಶೇಖರ ಅಂಗಡಿ, ಸ್ಥಾಯಿ ಸಮಿತಿ ಚೇರಮನ್ ಅಬ್ದುಲ್ ಬಾಗವಾನ ಮಾತನಾಡಿದರು.

**ಪ್ರಮುಖ ಠರಾವು ಪಾಸ:**

2020–21, 2022–23ನೇ ಸಾಲಿನ 15ನೇ ಹಣಕಾಸು ಹಾಗೂ ಎಸ್‌ಎಫ್‌ಸಿ ಮುಕ್ತನಿಧಿ ಯೋಜನೆಯಲ್ಲಿ ಮಂಜೂರಿಯಾದ ಕಾಮಗಾರಿಗಳ ಬದಲಾವಣೆ ಕ್ರೀಯಾಯೋಜನೆಗೆ ಮಂಜೂರಿ, ಆರೋಗ್ಯ ಮತ್ತು ತಾಂತ್ರೀಕ ವಿಭಾಗದ ವಿವಿಧ ಯೋಜನೆಯಲ್ಲಿ ಕರೆದ ಟೆಂಡರ್‌ಗಳಿಗೆ ಮಂಜೂರಾತಿ, ಚನ್ನಮ್ಮ ವೃತ್ತದ ವಾಣಿಜ್ಯ ಮಳಿಗೆ ಹಿಂಭಾಗದಲ್ಲಿರುವ ಖಾಲಿ ಜಾಗೆಯಲ್ಲಿ ಮೇಘಾ ಮಾರ್ಕೆಟ್ ನಿರ್ಮಾಣ ಸೇರಿದಂತೆ ಹಲವು ವಿಷಯಗಳಿಗೆ ಸರ್ವಾನುಮತದ ಒಪ್ಪಿಗೆ ನೀಡಿದರೆ, 15ನೇ ಹಣಕಾಸಿನ ಯೋಜನೆಯ ಉಳಿಕೆಯ 60 ಲಕ್ಷ ವೆಚ್ಚದ ಕ್ರೀಯಾಯೋಜನೆಯ ಕಾಮಗಾರಿಗಳ ಮಂಜೂರಾತಿಗೆ ತಡೆನೀಡಿ, ಮುಂದಿನ ಸಾಮಾನ್ಯ ಸಭೆವರೆಗೆ ಮುಂದೂಡಲಾಯಿತು.

ಉಪಾಧ್ಯಕ್ಷೆ ಶೀಲಾ ಭಾವಿಕಟ್ಟಿ, ಸ್ಥಾಯಿ ಸಮಿತಿ ಚೇರಮನ್ ಅಬ್ದುಲ್ ಬಾಗವಾನ, ಸದಸ್ಯರಾದ ಬಸವರಾಜ ಯರಗಟ್ಟಿ, ಸಜನಸಾಬ ಪೆಂಡಾರಿ, ಬಸವರಾಜ ಬುರುಡ, ಸ್ನೇಹಲ್ ಅಂಗಡಿ, ಭಾವನಾ ಪಾಟೀಲ, ಹೆಸ್ಕಾಂ ಅಧಿಕಾರಿ ರಾಜೇಶ ಬಾಗೋಜಿ, ನಗರ ಭೂಮಾಪನ ಅಧಿಕಾರಿ ಬಸರಿಗಿಡದ, ಪುರಸಭೆ ವ್ಯವಸ್ಥಾಪಕ ಎಸ್.ಎನ್.ಪಾಟೀಲ,

ಕಿರಿಯ ಅಭಿಯಂತರ ಎಸ್.ಎಂ.ಕಲಬುರ್ಗಿ, ಕಂದಾಯ ಅಧಿಕಾರಿ ಆರ್.ವೈ.ಸೊನ್ನದ, ಹಿರಿಯ ಆರೋಗ್ಯ ನಿರೀಕ್ಷಕ ಎಂ.ಎಂ. ಮುಗಳಖೋಡ, ಕಿರಿಯ ಆರೋಗ್ಯ ನಿರೀಕ್ಷಕರಾದ ಸಿದ್ದು ಅಳ್ಳಿಮಟ್ಟಿ, ರಾಜು ಹೂಗಾರ, ಸಿಬ್ಬಂದಿ ವಿಕ್ರಂ ಹವಾಲ್ದಾರ, ರಾಜೇಶ್ವರಿ ಸೋರಗಾಂವಿ, ರಾಮು ಮಾಂಗ, ಮಹಾಲಿಂಗ ಮಾಂಗ ಸೇರಿದಂತೆ ಹಲವರು ಇದ್ದರು.

# ಕೊಪ್ಪಳ ನಗರಸಭೆಯ ಎರಡು ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ

**ಕೊಪ್ಪಳ :** ವಿವಿಧ ಕಾರಣಗಳಿಂದಾಗಿ, ತೆರವಾಗಿರುವ ಕೊಪ್ಪಳ ನಗರಸಭೆಯ ಎರಡು ಸದಸ್ಯ ಸ್ಥಾನಗಳಿಗೆ ಉಪ-ಚುನಾವಣೆ ನಡೆಸುವಂತೆ ಅಧಿಸೂಚನೆ ಮೂಲಕ ರಾಜ್ಯ ಚುನಾವಣಾ ಆಯೋಗವು, ಚುನಾವಣಾ ದಿನಾಂಕಗಳನ್ನು ನಿಗಧಿಪಡಿಸಿ, ಅಧಿಸೂಚನೆಯನ್ನು ಹೊರಡಿಸಿದ್ದು, ಕೊಪ್ಪಳ ನಗರಸಭೆಯ ಈ ಎರಡು ಸದಸ್ಯ ಸ್ಥಾನಗಳಿಗೆ ಚುನಾವಣಾ ವೇಳಾಪಟ್ಟಿಯು ಪ್ರಕಟವಾಗಿರುತ್ತದೆ.

ಚುನಾವಣಾ ವೇಳಾಪಟ್ಟಿ: ನವೆಂಬರ್ 11ರಂದು ನಾಮಪತ್ರಗಳನ್ನು ಸಲ್ಲಿಸಲು ಅವಕಾಶ, ನ.11ರಂದು ನಾಮಪತ್ರಗಳನ್ನು ಪರಿಶೀಲನೆ, ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ನ.14ರಂದು ಕೊನೆಯ ದಿನವಾಗಿದೆ. ಮತದಾನ ಅವಶ್ಯಕವಿದ್ದರೆ, ನ.23ರಂದು ಬೆಳಿಗ್ಗೆ 07 ಗಂಟೆಯಿಂದ ಸಾಯಂಕಾಲ 05.00 ಗಂಟೆಯವರೆಗೆ ಮತದಾ ನಡೆಯಲಿದೆ. ಮರುಮತದಾನ ಇದ್ದಲ್ಲಿ, ಮತದಾನವನ್ನು ನ.25ರಂದು ಬೆಳಿಗ್ಗೆ 07 ಗಂಟೆಯಿಂದ ಸಾಯಂಕಾಲ 05 ಗಂಟೆಯವರೆಗೆ ನಡೆಸಲಾಗುವುದು. ನ.26ರಂದು ಬೆಳಿಗ್ಗೆ 08 ಗಂಟೆಯಿಂದ ಕೊಪ್ಪಳ ತಾಲ್ಲೂಕಿನ ಕೇಂದ್ರ ಸ್ಥಳದಲ್ಲಿ ಮತ ಎಣಿಕೆ ನಡೆಯಲಿದೆ ಹಾಗೂ ಅಂ- ದೇ ಚುನಾವಣೆ ಮುಕ್ತಾಯಗೊಳ್ಳಲಿದೆ.

ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳ ನೇಮಕಾತಿ: ವಿವಿಧ ಕಾರಣಗಳಿಂದಾಗಿ ತೆರವಾಗಿರುವ ಕೊಪ್ಪಳ ನಗರಸಭೆಯ 8ನೇ ಹಾಗೂ 22ನೇ ವಾರ್ಡಿನ ಸದಸ್ಯರ ಆಯ್ಕೆ ಚುನಾವಣೆಗಾಗಿ ಚುನಾವಣಾಧಿಕಾರಿಯಾಗಿ ಕೊಪ್ಪಳ ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ (ಮೊ.ಸಂ: 8762302963) ಹಾಗೂ ಸಹಾಯಕ ಚುನಾವಣಾಧಿಕಾರಿಯಾಗಿ ಕೊಪ್ಪಳ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇ- ರಿಯ ಅಧೀಕ್ಷಕ ಮಂಜುನಾಥ ಎನ್ (ಮೊ.ಸಂ: 9945868366) ಇವರನ್ನು ನೇಮಕಾತಿ ಮಾಡಲಾಗಿರುತ್ತದೆ.

ಚುನಾವಣಾಧಿಕಾರಿಗಳ ಕಛೇರಿ: ವಿವಿಧ ಕಾರಣಗಳಿಂದಾಗಿ

ತೆರವಾಗಿರುವ ಕೊಪ್ಪಳ ನಗರಸಭೆಯ 8ನೇ ಹಾಗೂ 11ನೇ ವಾರ್ಡಿನ ಸದಸ್ಯರ ಆಯ್ಕೆ ಚುನಾವಣೆಗಾಗಿ, ಕೊಪ್ಪಳ ನಗರಸಭೆ ಕಾರ್ಯಾಲಯದ ಸಭಾಂಗಣದಲ್ಲಿ

ಚುನಾವಣಾಧಿಕಾರಿಗಳ ಕಛೇರಿಯನ್ನು ಸ್ಥಾಪಿಸಲಾಗಿರುತ್ತದೆ. ಚುನಾವನಾಧಿಕಾರಿಗಳ ಕಛೇರಿಯಲ್ಲಿ, ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 03 ಗಂಟೆಯವರೆಗೆ (ಸಾರ್ವತ್ರಿಕ ರಜೆ ದಿನವನ್ನು ಹೊರತುಪಡಿಸಿ) ನಾಮಪತ್ರಗಳನ್ನು ಪಡೆಯಬಹುದಾಗಿದೆ.

ಮತದಾರರ ವಿವರ: ವಿವಿಧ ಕಾರಣಗಳಿಂದಾಗಿ ತೆರವಾಗಿರುವ ಕೊಪ್ಪಳ ನಗರಸಭೆಯ 8ನೇ ಹಾಗೂ 11ನೇ ವಾರ್ಡಿನ ಸದಸ್ಯರ ಆಯ್ಕೆ ಚುನಾವಣೆಗಾಗಿ, ಅಂತಿಮ ಮತದಾರರ ಪಟ್ಟಿಯಂತೆ, 8ನೇ ವಾರ್ಡಿನಲ್ಲಿ 706 ಪುರುಷರು, 701 ಮಹಿಳೆಯರು ಸೇರಿ ಒಟ್ಟು 1407 ಮತದಾರರಿದ್ದಾರೆ. ಅದೇ ರೀತಿ 11ನೇ ವಾರ್ಡಿನಲ್ಲಿ 534 ಪುರುಷರು, 533 ಮಹಿಳೆಯರು ಸೇರಿ ಒಟ್ಟು 1087 ಮತದಾರರಿದ್ದಾರೆ.

ಅಭ್ಯರ್ಥಿಯ ಚುನಾವಣಾ ವೆಚ್ಚದ ಮಿತಿ: ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ರ ಪ್ರಕರಣ 16ಎ, 16ಬಿ, 16ಸಿ ರಂತೆ ನಗರಸಭೆ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚುನಾವಣಾ ವೆಚ್ಚಗಳ ಬಗ್ಗೆ ಲೆಕ್ಕಪತ್ರವನಿಟ್ಟು, ಅದನ್ನು ಚುನಾವಣಾಧಿಕಾರಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ಕರ್ನಾಟಕ ಪೌರಸಭೆಗಳ (ಕೌನ್ಸಿಲರುಗಳ ಚುನಾವಣೆ) ನಿಯಮಗಳು-1977 ರ ನಿಯಮ- 22ಡಿ ರಲ್ಲಿ ನಗರಸಭೆಗಳಿಗೆ ಸಂಬಂಧಿಸಿದಂತೆ ರೂಪಾಯಿ 2.00 ಲಕ್ಷಗಳ ಚುನಾವಣಾ ವೆಚ್ಚದ ಗರಿಷ್ಠ ಮಿತಿಯಾಗಿರುತ್ತದೆ.

ಮತಗಟ್ಟೆಗಳ ವಿವರ: ವಿವಿಧ ಕಾರಣಗಳಿಂದಾಗಿ ತೆರವಾಗಿರುವ ಕೊಪ್ಪಳ ನಗರಸಭೆಯ 8ನೇ ವಾರ್ಡಿನ ಮತಗಟ್ಟೆ ಸಂಖ್ಯೆ 16-ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ (ಪೂರ್ವಭಾಗದ ಕೊಠಡಿ) ಬ್ರಹ್ಮನವಾಡಿ, ಕೊಪ್ಪಳ ಹಾಗೂ 11ನೇ ವಾರ್ಡಿನ ಮತಗಟ್ಟೆ ಸಂಖ್ಯೆ 20-ಸರ್ಕಾರಿ ಕೇಂದ್ರ ಪ್ರಾಥಮಿಕ ಶಾಲೆ, (ಇಇ ಕಛೇರಿ ಪಿ.ಆರ್.ಇ.ಡಿ ವಿಭಾಗದ ಆವರಣ) ಪೂರ್ವಭಾಗ, ಕೊಪ್ಪಳ ಕಟ್ಟಡಗಳಲ್ಲಿ ಮತಗಟ್ಟೆಯನ್ನು ಸ್ಥಾಪಿಸಲಾಗಿರುತ್ತದೆ.

ಭದ್ರತಾ ಕೊಠಡಿ ನಿರ್ಮಾಣ: ಕೊಪ್ಪಳ ನಗರಸಭೆಯ 8ನೇ ಹಾಗೂ 11ನೇ ವಾರ್ಡಿನ ಸದಸ್ಯರ ಆಯ್ಕೆಗಾಗಿ ನವೆಂಬರ್ 23ರ ಮತದಾನ ಮುಕ್ತಾಯದ ನಂತರ ತಹಶೀಲ್ದಾರ ಕಛೇರಿಯಲ್ಲಿ ಭದ್ರತಾ ಕೊಠಡಿಯನ್ನು ನಿರ್ಮಾಣ ಮಾಡಲಾಗಿರುತ್ತದೆ.

ಮತ ಎಣಿಕೆ ಕಾರ್ಯ: ಕೊಪ್ಪಳ ನಗರಸಭೆಯ 8ನೇ ಹಾಗೂ 11ನೇ ವಾರ್ಡಿನ ಸದಸ್ಯರ ಆಯ್ಕೆಗಾಗಿ ನ.23ರ ಮತದಾನ ಮುಕ್ತಾಯದ ನಂತರ ನ.26ರಂದು ಬೆಳಿಗ್ಗೆ 08 ಗಂಟೆಯಿಂದ ತಹಶೀಲ್ದಾರ ಕಛೇರಿಯ ಸಭಾಂಗಣದಲ್ಲಿ ಮತ ಎಣಿಕೆ ಕಾರ್ಯವು ಪ್ರಾರಂಭಗೊಳುತ್ತದೆ ಹಾಗೂ ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ನ.26ರಂದು ಚುನಾವಣಾ ಪ್ರಕ್ರೀಯೆ ಮುಕ್ತಾಯಗೊಳ್ಳುತ್ತದೆ.

ಚುನಾವಣಾ ಅಭ್ಯರ್ಥಿಗಳು ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳು ಗಮನಕ್ಕೆ ಬಂದಾಗ ಆಯೋಗದ ಆದೇಶದಂತೆ ಕ್ರಮವಹಿಸಲಾಗುವುದು ಎಂದು ಕೊಪ್ಪಳ ನಗರಸಭೆ ವಾರ್ಡ ಸಂಖ್ಯೆ 8 ಮತ್ತು 11ರ ಚುನಾವಣಾಧಿಕಾರಿ ಕೃಷ್ಣಮೂರ್ತಿ ದೇಸಾಯಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಮಿಸುವಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯ



**ವಿಜಯಪುರ :** ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಮಿಸುವುದರಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯವಾಗಿದೆ. ಶಿಕ್ಷಕರು ಪಠ್ಯಕ್ರಮಕ್ಕೆ ಮಾತ್ರ ಸೀಮಿತವಾಗಿರದೆ ಸಹಪಠ್ಯ ಚಟುವಟಿಕೆಗಳಲ್ಲಿ ಕೂಡ ಸಕ್ರಿಯವಾಗಿರಬೇಕು. ಸಹಪಠ್ಯ ಚಟುವಟಿಕೆಗಳಿಂದ ಸಂವನ ಕೌಶಲ್ಯ ಬೆಳೆಯುವುದರ ಜೊತೆಗೆ ವ್ಯಕ್ತಿಯ ಸರ್ವಾಂಗಿಣ ಅಭಿವೃದ್ಧಿಗೆ ಸಹಪಠ್ಯ ಚಟುವಟಿಕೆಗಳು ಪೂರಕವಾಗುತ್ತವೆ ಎಂದು ಚೇತನಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ರಾಜಶ್ರೀ ಜುಗತಿಯವರು ಹೇಳಿದರು.

ಅವರು ಇಂದು ಜಿಲ್ಲಾ ಪಂಚಾಯತ್ ವಿಜಯಪುರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ನಗರ ವಿಜಯಪುರದ ವತಿಯಿಂದ ನಗರದ ಚೇತನಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡ ಶಿಕ್ಷಕರ ಸಹ ಪಠ್ಯ ಚಟುವಟಿಕೆಗಳ ಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಾರ್ಯಾಲಯದ ಟಿ.ಪಿ.ಓ. ಎಸ್. ಜೆ. ಬಿರಾದರ ಮಾತನಾಡಿ ಶಿಕ್ಷಕರು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಸೃಜನಶೀಲತೆ ವೃದ್ಧಿಯಾಗುತ್ತದೆ ಎಂದರು.

ಚೇತನಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಸಾಹಿತಿ ಎ. ಎಚ್. ಕೊಳಮಲಿ ಮಾತನಾಡಿ ಸಹಪಠ್ಯ ಚಟುವಟಿಕೆಯಲ್ಲಿ ಭಾಗವಹಿಸುವುದರಿಂದ ಶಿಕ್ಷಕರ ಕ್ರಿಯಾಶೀಲತೆಗೆ ಉತ್ತೇಜನ ದೊ- ರೆಯುತ್ತದೆ. ತಮ್ಮ ಪ್ರತಿಭೆಯನ್ನು ಹಂಚಿಕೊಳ್ಳಲು ಸೂಕ್ಷ್ಮವಾದ ವೇದಿಕೆ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆ ಎಂದು ಹೇಳಿದರು.

ಶಿಕ್ಷಣ ಸಂಯೋಜಕರಾದ ಶ್ರೀ. ಪ್ರಕಾಶ್ ನಾಲತವಾಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಣ ಸಂಯೋಜ- ಕರಾದ ಎ. ಕೆ. ದಳವಾಯಿ, ಎಲ್. ಎಸ್. ಬಿರಾದಾರ, ಸೇರಿದಂತೆ ಇನ್ನುಳಿದ ಶಿಕ್ಷಣ ಸಂಯೋಜಕರು, ಬಿ.ಆರ್.ಸಿ., ಸಿ.ಆರ್.ಸಿ. ಯವರು ಮತ್ತು ಚೇತನಾ ಶಾಲೆಯ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ವಿಜಯಪುರ : ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಮಿಸುವುದರಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯವಾಗಿದೆ. ಶಿಕ್ಷಕರು ಪಠ್ಯಕ್ರಮಕ್ಕೆ ಮಾತ್ರ ಸೀಮಿತವಾಗಿರದೆ ಸಹಪಠ್ಯ ಚಟುವಟಿಕೆಗಳಲ್ಲಿ ಕೂಡ ಸಕ್ರಿಯವಾಗಿರಬೇಕು. ಸಹಪಠ್ಯ ಚಟುವಟಿಕೆಗಳಿಂದ ಸಂವನ ಕೌಶಲ್ಯ ಬೆಳೆಯುವುದರ ಜೊತೆಗೆ ವ್ಯಕ್ತಿಯ ಸರ್ವಾಂಗಿಣ ಅಭಿವೃದ್ಧಿಗೆ ಸಹಪಠ್ಯ ಚಟುವಟಿಕೆಗಳು ಪೂರಕವಾಗುತ್ತವೆ ಎಂದು ಚೇತನಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ರಾಜಶ್ರೀ ಜುಗತಿಯವರು ಹೇಳಿದರು.

ಅವರು ಇಂದು ಜಿಲ್ಲಾ ಪಂಚಾಯತ್ ವಿಜಯಪುರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ನಗರ ವಿಜಯಪುರದ ವತಿಯಿಂದ ನಗರದ ಚೇತನಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡ ಶಿಕ್ಷಕರ ಸಹ ಪಠ್ಯ ಚಟುವಟಿಕೆಗಳ ಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಾರ್ಯಾಲಯದ ಟಿ.ಪಿ.ಓ. ಎಸ್. ಜೆ. ಬಿರಾದರ ಮಾತನಾಡಿ ಶಿಕ್ಷಕರು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಸೃಜನಶೀಲತೆ ವೃದ್ಧಿಯಾಗುತ್ತದೆ ಎಂದರು.

ಚೇತನಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಸಾಹಿತಿ ಎ. ಎಚ್. ಕೊಳಮಲಿ ಮಾತನಾಡಿ ಸಹಪಠ್ಯ ಚಟುವಟಿಕೆಯಲ್ಲಿ ಭಾಗವಹಿಸುವುದರಿಂದ ಶಿಕ್ಷಕರ ಕ್ರಿಯಾಶೀಲತೆಗೆ ಉತ್ತೇಜನ ದೊ- ರೆಯುತ್ತದೆ. ತಮ್ಮ ಪ್ರತಿಭೆಯನ್ನು ಹಂಚಿಕೊಳ್ಳಲು ಸೂಕ್ಷ್ಮವಾದ ವೇದಿಕೆ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆ ಎಂದು ಹೇಳಿದರು. ಶಿಕ್ಷಣ ಸಂಯೋಜ- ಕರಾದ ಶ್ರೀ. ಪ್ರಕಾಶ್ ನಾಲತವಾಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಣ ಸಂಯೋಜಕರಾದ ಎ. ಕೆ. ದಳವಾಯಿ, ಎಲ್. ಎಸ್. ಬಿರಾದಾರ, ಸೇರಿದಂತೆ ಇನ್ನುಳಿದ ಶಿಕ್ಷಣ ಸಂಯೋಜಕರು, ಬಿ.ಆರ್.ಸಿ., ಸಿ.ಆರ್.ಸಿ. ಯವರು ಮತ್ತು ಚೇತನಾ ಶಾಲೆಯ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.



# ರಾಷ್ಟ್ರೀಯ ಏಕತಾ ದಿನ ಆಚರಣೆ

**ವಿಜಯಪುರ :** ತಾಲೂಕಿನಸವನಹಳ್ಳಿಗ್ರಾಮದಲ್ಲಿಶ್ರೀಸ್ವಾಮಿವಿವ ೇಕಾನಂದಸಮಗ್ರಗ್ರಾಮೀಣಾಭಿವೃದ್ಧಿಯವಕಸಂಘ (ರಿ) ಮತ ್ತನೆಹರುಯುವಕೇಂದ್ರವಿಜಯಪುರಇವರಸಂಯುಕ್ತಾಶಯದ ಲ್ಲಿಸರದಾರ ವಲ್ಲಭಭಾಯ ಪಟೇಲ ಜಯಂತಿಯಅಂಗವಾ ಗಿರಾಷ್ಟ್ರಯಏಕತಾದಿವಸಆಚರಿಸಲಾತು.

ಈ ಸಂದರ್ಭದಲ್ಲಿಸುನೀಲ,ರಾಜಕುಮಾರ,ಮಂಜು,ಅಪ್ಪಸಾಯ ಬ,ಸಂಗಪ್ಪ,ಉಮೇಶ,ತಿಪ್ಪಣ್ಣ,ಕೌರಅಲಿ,ನಾಗಪ್ಪ,ಮಲ್ಲಪ್ಪ,ಸವನ ಹಳ್ಳಿಯಗ್ರಾಸ್ಥರುಗ್ರಾಮಶ್ರೀಸ್ವಾಮಿವಿವೇಕಾನಂದಯುವಕಸಂಘ ದಯುವಕರುಹಾಗೂಸಂಘದಸಂಚಾಲಕರಾದಮಲ್ಲಿಕಾರ್ಜುನ ಹುಣಶ್ಯಾಳಭಾಗಿಯಾದರು.

# ರಾಮನನ್ನು ಸೃಷ್ಠಿ ಮಾಡಿದ್ದೆ ವಾಲ್ಮೀಕಿ: ನಿರಂಜನ ಮಹಾಸ್ವಾಮಿಗಳು





**ಮರಿಯಮ್ಮನಹಳ್ಳಿ :** ರಾಮನನ್ನು ಸೃಷ್ಠಿ ಮಾಡಿದ್ದೆ ವಾಲ್ಮೀಕಿ. ವಾಲ್ಮೀಕಿ ಇಲ್ಲದಿದ್ದರೆ ರಾಮಾಯಣ ಮತ್ತು ಹನುಮಂತ ಇರುತ್ತಿರಲಿಲ್ಲ. ಅಲ್ಲದೇ ಸಮಾಜಕ್ಕೆ ನಾಯಕರ ಕೊಡುಗೆಗಳು ಅಪಾರವಾದದ್ದು. ಅಂದಿನ ಕಾಲದಲ್ಲಿ ರಾಜರ ಮನೆತನದಲ್ಲಿ ನಾಯಕರೇ ಸೇನಾಧಿಪತಿಗಳಾಗಿದ್ದರು ಎಂದು ಹೇಳಿದರು.

ಅವರು ಪಟ್ಟಣ ಸಮೀಪದ ದೇವಲಾಪುರ ಗ್ರಾಮದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಮರಿಯಮ್ಮನಹಳ್ಳಿ ಹೋಬಳಿ ಘಟಕ ಹಾಗೂ ದೇವಲಾಪುರ ಗ್ರಾಮದ ಘಟಕದಿಂದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ,

ಜಗತ್ತಿನಲ್ಲಿ ವಾಲ್ಮೀಕಿ ಜನಾಂಗದ ತನ್ನದೇ ಆದ ಹಿನ್ನೆಲೆ ಇದೆ. ಶಿಕ್ಷಣ ಹೋರಾಟ ಮತ್ತು ಸಂಘಟನೆಗಳಿಂದ ರಾಜ್ಯ ಮತ್ತು ದೇಶವನ್ನು ಕಾಪಾಡಿಕೊಳ್ಳ ಬಹುದು ಎಂದು ಅರ್ಥಪೂರ್ಣವಾಗಿ ವಾಲ್ಮೀಕಿ ಸಂಘ ಸಮಾಜದಲ್ಲಿ ಕಲಿಸಿಕೊಟ್ಟಿದೆ ಎಂದು ನಾಗಲಾಪುರ ಶ್ರೀಒಪ್ಪತ್ತೇಶ್ವರ ಮಠದ ನಿರಂಜನ ಪ್ರಭು ಮಹಾಸ್ವಾಮಿಗಳು ಹೇಳಿದರು.

ನಂತರ ಶಾಸಕ ನೇಮಿರಾಜ್ ನಾಯ್ಕ ರವರು ಕಾರ್ಯವನ್ನು ಉದ್ಘಾಟಿಸಿ ಮಾತನಾಡಿ, ನಿಮ್ಮ ಕೋರಿಕೆಯಂತೆ ಮರಿಯಮ್ಮನಹಳ್ಳಿ ಯಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಿಸಲಾಗುವುದು. ಮೊದಲು ಹಗರಿಬೊಮ್ಮನಹಳಿಯಲ್ಲಿ ಪೂರ್ಣಗೊಳಿಸೋಣ ನಾನು ಶಾಸಕನಾಗಿದ್ದಾಗ ಭವನಕ್ಕೆ ಜಾಗ ಕೊಟ್ಟು, ಕಾಪೌಂಡ್ ಮಾಡಿ 1ಕೋಟಿ ಹಣ ಕೊಡಲಾಗಿತ್ತು.ನಂತರಶ್ರೀರಾಮುಲುಅವರು 1ಕೋಟಿ ಕೊಟ್ಟಿದ್ದರು. ಸದ್ಯ ಶೀಟ್ ಹಾಕಿದ್ದು ಕೊನೇ ಹಂತದಲ್ಲಿದೆ ಅದನ್ನು 2025ರಂದು ಲೋಕಾರ್ಪಣೆ ಮಾಡಬೇಕಿದೆ. ವಾಲ್ಮೀಕಿ ಸ್ವಾಮೀಜಿಯವರು ಸಮಾಜವನ್ನು ಒಗ್ಗೂ ಡಿಸಿಕೊಂಡು ರಾಜನಹಳ್ಳಿಯಿಂದ ರಾಜಧಾನಿಯ ವರೆಗೆ ವಾಲ್ಮೀಕಿ ಸಮಾಜಕ್ಕೆ ಮತ್ತು ನೂರಾರು ಸಮುದಾಯದ ಹೇಳಿಗೆಗಾಗಿ ರಾಜ್ಯದಲ್ಲಿಯೇ ಮೊದಲು ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮಿಗಳು ಪಾದಯಾತ್ರೆಯನ್ನು ಕೈಗೊಂಡು ಮೀಸಲಾತಿಯನ್ನು 7%ಗೆ ಹೆಚ್ಚಳ ಮಾಡಿಸಿದರು. ಅಲ್ಲದೇ ರಾಜಕಾರಣ ಚುನಾವಣೆ ಬಂದಾಗ ಮಾತ್ರ ರಾಜಕಾರಣ ಮಾಡಬೇಕು. ಆದರೆ ಅಭಿವೃದ್ಧಿ ವಿಚಾರದಲ್ಲಿ ಎಲ್ಲರೂ ಒಂದಾಗಿ ಸೇರಿಕೊಂಡು ಹಗರಿಬೊಮ್ಮನಹಳ್ಳಿ ಕ್ಷೇತ್ರವನ್ನು ಅಭಿವೃದ್ಧಿ ಮಾಡೋಣ ಎಂದು ಕರೆಕೊಟ್ಟರು.

ನಂತರ ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮಿಗಳು ಮಾತನಾಡಿ, ಪ್ರತಿಯೊಂದು ಸಮುದಾಯದ ಮೂಲ ವೃತ್ತಿಗಳು ಇವೆ. ಹಾಗೆ ಬೇಡರ ವೃತ್ತಿ ಹಿಂದಿನ ಕಾಲದಲ್ಲಿ ಬೇಟೆ ಆಡುವುದು ವೃತ್ತಿ ಇತ್ತು. ಡಾ.ಅಂಬೇಡ್ಕರ್ ರವರು ಜಾತಿಯ ಕಾರಣಕ್ಕಾಗಿ ಸಮಾಜದಲ್ಲಿ ತಳ ಸಮುದಾಯದ ವ್ಯಕ್ತಿಗಳನ್ನು ಅಗೌರವವಾಗಿ ಕಾಣುತ್ತಿದ್ದರು. ಈ ಕೆಟ್ಟ ಪದ್ಧತಿಯನ್ನು ಹೋಗಲಾಡಿಸಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಮುಖ್ಯವಾಹಿನಿಗೆ ಬರಬೇಕೆಂದು ಅವಕಾಶ ಮಾಡಿಕೊಟ್ಟರು. ವಾಲ್ಮೀಕಿ ಜಯಂತಿಯನ್ನು ಸಮಾಜವನ್ನು ಜಾಗೃತಗೊಳಿಸಲು ವಾಲ್ಮೀಕಿ ಜಯಂತಿಯನ್ನು ಆಚರಣೆ ಮಾಡುತ್ತಾರೆ. ವಾಲ್ಮೀಕಿ ಯವರು ಪರಿವರ್ತನೆಯಾಗಿ ತಮ್ಮನ್ನು ಆತ್ಮಕಲ್ಯಾಣ ಮಾಡಿಕೊಂಡು ರಾಮಾಯಣವನ್ನು ಸೃಷ್ಟಿ ಮಾಡಿದರು. ಮತ್ತು ವಾಲ್ಮೀಕಿ ನಿಗಮದಲ್ಲಿ 187 ಕೋಟಿ ಹಗರಣವಾಗಿದೆ.

ದಲಿತರ ಪರವಾಗಿ ಬಿಜೆಪಿ ಪಕ್ಷದವರು ಹೋರಾಟ ಮಾಡಿದರು. ನಂತರ ಮೂಡ ಪ್ರಕರಣ ಬಂದ ನಂತರ ಬಿಜೆಪಿಯವರು ದಲಿತರನ್ನು ಕೈ ಬಿಟ್ಟು ಮೂಡ ಪ್ರಕರಣದ ಹಿಂದೆ ಹೋಗುತ್ತಿದ್ದಾರೆ. ಆದರೆ ನಾವು ವಾಲ್ಮೀಕಿ ಸಮುದಾಯದವರು ಹೋರಾಟಕ್ಕೆ ನಿಲ್ಲುತ್ತವೆ. ಅಲ್ಲದೇ ಬೇರೆ ಬೇರೆ ಜಾತಿಯವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಕೊಳ್ಳುತ್ತಿದ್ದಾರೆ. ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಪಟ್ಟಣದ ಮರಿಯಮ್ಮನಹಳ್ಳಿಯ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ಮತ್ತು ಶ್ರೀ ಆಂಜನೇಯ ಸ್ವಾಮಿಗಳ ದೇವಸ್ಥಾನದಿಂದ ದೇವಲಾಪುರ ಗ್ರಾಮದವರೆಗೆ ಬೆಳ್ಳಿ ರಥದಲ್ಲಿ ಮೆರವಣಿಗೆ ನಡೆಯಿತು. ನಂತರ ವೇದಿಕೆಮೇಲೆ ಸಾಧಕರಿಗೆ ಸನ್ಮಾನ ಮಾಡಲಾಯಿತು.

ಈ ಸಂದರ್ಭದಲ್ಲಿ ವಾಲ್ಮೀಕಿ ಸಂಘದ ಪಟ್ಟಣದ ಅಧ್ಯಕ್ಷ ರೋಗಣ್ಣನವರ ಮಂಜುನಾಥ, ಹೋಬಳಿ ಘಟಕದ ಅಧ್ಯಕ್ಷ ಮರಡಿ ಹನುಮಂತ, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಗೋವಿಂದರ ಪರಶುರಾಮ, ಜಂಬಯ್ಯ ನಾಯಕ, ಕುರಿ ಶಿವಮೂರ್ತಿ, ಎನ್.ಸತ್ಯನಾರಾಯಣ, ಗುಜ್ಜಲ್ ಶ್ರೀನಾಥ್, ಡಾ.ನಾಗರತ್ನಮ್ಮ, ರೈತ ಸಂಘದ ಜಿಲ್ಲಾಧ್ಯಕ್ಷ ಸಿಎ.ಗಾಳೆಪ್ಪ, ಎಸ್.ನವೀನ್ ಕುಮಾರ್, ಗರಗ ಪ್ರಕಾಶ್, ಹನುಮಕ್ಕ ಶಿಕ್ಷಕಿ, ಮಂಜುನಾಥ ನಿವೃತ್ತ ಶಿಕ್ಷಕರು,

ತಳವಾರ್ ಹುಲುಗಪ್ಪ, ದೊಡ್ಡ ರಾಮಣ್ಣ, ಗುಂಡಾ ಸೋಮಣ್ಣ, ಓಬಣ್ಣ, ಚಿನ್ನಾಪ್ರಪ್ಪ, ರಾಜಪ್ಪ, ಪ್ರಕಾಶ್ ತಿಮ್ಮಲಾಪುರ, ಪ.ಪಂ.ಸದಸ್ಯ ಮರಡಿ ಸುರೇಶ್, ಗ್ರಾ.ಪಂ.ಸದಸ್ಯ ಅಕ್ಕಮಹಾದೇವಿ, ಶ್ರೀನಿವಾಸ, ಹಾಗೂ ಗ್ರಾ.ಪಂ.ಸದಸ್ಯರು, ಮುಖಂಡರು ಇತರರಿದ್ದರು.ವನ್ನು ಕಾಪಾಡಿಕೊಳ್ಳ ಬಹುದು ಎಂದು ಅರ್ಥಪೂರ್ಣವಾಗಿ ವಾಲ್ಮೀಕಿ ಸಂಘ ಸಮಾಜದಲ್ಲಿ ಕಲಿಸಿಕೊಟ್ಟಿದೆ. ಎಂದು ನಾಗಲಾಪುರ ಶ್ರೀಒಪ್ಪತ್ತೇಶ್ವರ ಮಠದ ನಿರಂಜನ ಪ್ರಭು ಮಹಾಸ್ವಾಮಿಗಳು ಹೇಳಿದರು.

**ವರದಿ, ಲಕ್ಕಿಮರದ ಮಂಜುನಾಥ**

### ಬಿ.ವ್ಹಿ.ವ್ಹಿ.ಎಸ್. ಹೋಮಿಯೋಪಥಿ ಕಾಲೇಜನಲ್ಲಿ ವಿಜೃಂಭನೆಯ ಹೋಮಿಯೋ ಕನ್ನಡ ಉತ್ಸವ

# ನಮ್ಮ ಸಂಸ್ಕೃತಿ, ನಮ್ಮಭಾಷೆ, ನಮ್ಮತನಕ್ಕೆ ಶಕ್ತಿ ತುಂಬಿದಾಗ ಕನ್ನಡ ರಾಜ್ಯೋತ್ಸವ ಸಾರ್ಥಕ: ಸಿದ್ರಾಮ ಮನಹಳ್ಳಿ

**ಬಾಗಲಕೋಟೆ :** ನಮ್ಮ ಸಂಸ್ಕೃತಿ, ನಮ್ಮ ಭಾಷೆ, ನಮ್ಮತನಕ್ಕೆ ಶಕ್ತಿ ತುಂಬಿದಾಗ ಮಾತ್ರ ಕನ್ನಡ ರಾಜ್ಯೋತ್ಸವ ಸಾರ್ಥಕವಾಗುತ್ತದೆ ಎಂದು ಬ.ವಿ.ವಿ. ಸಂಘದ ಬಸವೇಶ್ವರ ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯ ಗೌರವ ನಿರ್ದೇಶಕರಾದ ಸಿದ್ದರಾಮ ಮನಹಳ್ಳಿ ಹೇಳಿದರು.

ಅವರು ಬಿವಿವಿಎಸ್ ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಆಯೋಜಿಸಿದ 69ನೇ ಕನ್ನಡ ರಾಜ್ಯೋತ್ಸವ ಹೋಮಿಯೋ ಕನ್ನಡ ಉತ್ಸವವನ್ನು ಕನ್ನಡ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾಚನೆ ಮೂಲಕ ಗೌರವ ನಮನ ಸಲ್ಲಿಸಿ ಮಾತನಾಡಿದರು. ರಾಜ್ಯದ ಹಲವಾರು ಪ್ರದೇಶಗಳು ವಿವಿಧ ರಾಜ್ಯಗಳಲ್ಲಿ ಹಂಚಿ ಹೋಗಿದ್ದವು. ನಾಡಿನ ಏಕೀಕರಣವಾಗಿ ನಮ್ಮ ರಾಜ್ಯ ವಿಶಾಲ ಕರ್ನಾಟಕವಾಗಿ ಬೆಳೆದು ನಿಂತಿದೆ. ಏಕೀಕರಣದ ಮೂಲಕ ರಾಜ್ಯೋತ್ಸವದ ಅರ್ಥಪೂರ್ಣ ಆಚರಣೆ ಸಾಧ್ಯವಾಗಿದೆ ಎಂದು ವಿಶ್ಲೇಷಿಸಿ ಮಾತನಾಡುತ್ತ ನಮ್ಮ ಸಂಸ್ಕೃತಿ, ಭಾಷೆ, ನಮ್ಮತನಕ್ಕೆ ಶಕ್ತಿ ತುಂಬುವ ದಿನವಿದು. ಕನ್ನಡ ನಾಡಿನ ಇತಿಹಾಸ ಕಲೆ ಸಂಸ್ಕೃತಿ, ಆಚಾರ- ವಿಚಾರದ ಮಹತ್ವವನ್ನು ಹಾಗೂ ಕನ್ನಡ – ಕನ್ನಡಿಗ –ಕರ್ನಾಟಕ ಎಂಬ ಮಹತ್ವವನ್ನು ಅರಿತಾಗ ಮಾತ್ರ ಕನ್ನಡ ರಾಜ್ಯೋತ್ಸವ ಆಚರಣೆ ಸ್ವಾರ್ಥಕವಾಗುತ್ತದೆ ಎಂದರು.

ಪ್ರಾಧ್ಯಾಪಕಿ ಡಾ.ವಿಜಯಲಕ್ಷ್ಮಿ ಪಾಟೀಲ ಪ್ರಾಸ್ತವಿಕವಾಗಿ ಮಾತನಾಡಿ ನಾವು ಎಷ್ಟೇ ಭಾಷೆಗಳನ್ನು ಕಲಿತಿದ್ದರೂ ನಮ್ಮ ಜೀವನದ ಭಾಷೆ ಕನ್ನಡ. ಕನ್ನಡ ತಾಯಿಯ ಭೂಮಿಯಲ್ಲಿ ನೆಲೆಸಿರುವುದೇ ನಮ್ಮೆಲ್ಲರ ಪುಣ್ಯ, ಸಾವಿರಾರು ವರ್ಷ ಇತಿಹಾಸವಿರುವ ಕನ್ನಡ ನಾಡು ನುಡಿ ಸಂಸ್ಕೃತಿಗೆ ಅನೇಕ ಮಹನೀಯರ ಕೊಡುಗೆ ಇದೆ ಎಂದರು. ಪ್ರಾಚಾರ್ಯ ಡಾ.ಅರುಣ ಹೂಲಿ ಮಾತನಾಡಿ ಎಂಟು ಜ್ಞಾನಪೀಠ ಪ್ರಶಸ್ತಿ ಪಡೆದ ನಾಡು ನಮ್ಮದು, ವೈದ್ಯರು ವೈದ್ಯ ವಿದ್ಯಾರ್ಥಿಗಳು ಆಂಗ್ಲ ಭಾಷೆಯ ವ್ಯಾಮೋಹದಲ್ಲಿ ಕನ್ನಡಕ್ಕೆ ನಿರ್ಲಕ್ಷ ಸಲ್ಲ, ಮಾತೃ ಭಾಷೆ ನಮಗೆ ಅನ್ನ ನೀಡುವ ಭಾಷೆ ಕನ್ನಡಕ್ಕೆ ಗೌರವ ಕೊಟ್ಟಾಗ ಮಾತ್ರ ಆತ್ಮ-ಬದುಕು ತೃಪ್ತಿ. ಸ್ವತಂತ್ರ ಪೂರ್ವದಿಂದಲೂ ನಮ್ಮ ಬವಿವ ಸಂಘ ಕನ್ನಡ ಪೋಷಿಸಿ,ಉಳಿಸಿ ಬೆಳಸುವಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದರು.

ಇದೇ ಸಂದರ್ಭದಲ್ಲಿ ಡಾ.ರವಿ.ಕೋಟೆಣ್ಣವರ ಬಿ ಈ ಸಿ 90.4 ಎಫ್ ಎಮ್ ರೇಡಿಯೋ ಸಂವಾದ ಸಂಪೂರ್ಣ ಆರೋಗ್ಯಕ್ಕಾಗಿ ಹೋಮಿಯೋಪಥಿ ಕುರಿತು ಮಾತನಾಡಿ ಭಾಗವಹಿಸಿದ ವೈದ್ಯ ಉಪನ್ಯಾಸಕರುಗಳಿಗೆ ಪ್ರಮಾಣ ಪತ್ರ ವಿತರಿಸಿದರು.

ಗಮನ ಸೆಳೆದ ಇಳಕಲ್ ಸೀರೆ : ವಿದ್ಯಾರ್ಥೀನಿಯರು ಇಳಕಲ್ಲ ಸೀರೆಯನ್ನುಟ್ಟು ಕನ್ನಡ ಭುವನೇಶ್ವರಿಯ ಭವ್ಯ ಶೋಭಾಯಾತ್ರೆಯಲ್ಲಿ ಕನ್ನಡಾಂಬೆಯ ಹಾಡುಗಳಿಗೆ ಹೆಜ್ಜೆ ಹಾಕಿದರು. ವಿದ್ಯಾರ್ಥಿನಿ ವೀಣಾ ಕೊಣ್ಣೂರ ಭುವನೇಶ್ವರಿಯ ವೇಶಧರಿಸಿ ಎಲ್ಲರ ಕಣ್ಮಣ ಸೆಳೆದಳು.

# 66ನೇ ವರ್ಷದ ಅದ್ದೂರಿ ಗಣೇಶೋತ್ಸವ

**ಕೃಷ್ಣರಾಜಪೇಟೆ :** ಸಂತೆಬಾಚಳ್ಳಿ ಗೆಳೆಯರ ಬಳಗ ಯುವಕ ಸಂಘದ ನೇತೃತ್ವದಲ್ಲಿ ಅದ್ದೂರಿಯಾಗಿ ನಡೆದ 66ನೇ ವರ್ಷದ ಅದ್ದೂರಿ ಗಣೇಶೋತ್ಸವ ಸಮಾರಂಭ

ಬೆಡದಹಳ್ಳಿ ಶ್ರೀ ಪಂಚಭೂತೇ ಶ್ವರ ಮಠದ ಶ್ರೀ ರುದ್ರಮುನಿ ಸ್ವಾಮೀಜಿ ಹಾಗೂ ತೆಂಡೇ- ಕೆರೆ ಬಾಳೆಹೊನ್ನೂರು ಶಾಖಾ ಮಠದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ ನಡೆದ 66ನೇ ವರ್ಷದ ಗಣೇಶೋತ್ಸವ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಶಾಸಕ ಹೆಚ್.ಟಿ.ಮಂಜು, ಸಮಾಜ ಸೇವಕ ಮಲ್ಲಿಕಾರ್ಜುನ, ಮನಮುಲ್ ನಿರ್ದೇಶಕ ಡಾಲು ರವಿ, ಸದ್ಭಾವನಾ ಸೇವಾ ಟ್ರಸ್ಟ್ ಅಧ್ಯಕ್ಷ ಅಘಲಯ ವಿಜಯ್ ಕುಮಾರ್, ಹಿರಿದೇವಮ್ಮ ಟ್ರೇಡರ್ಸ್ ಭಾರತೀಪುರ ಡಾ. ಪುಟ್ಟಣ್ಣ, ಟಾಟಾ ಕಂಪನಿ ಪುನೀತ್, ಗ್ರಾಮ ಪಂಚಾಯತ್ ಅಧ್ಯಕ್ಷೆ ಮಂಗಳ, ದಿವಿ ಕುಮಾರ್, ಮೋಹನ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಶೋಕ್, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕಿರಾಮ್, ಗೆಳೆಯರ ಬಳಗದ ಸಂಸ್ಥಾಪಕ ಅಧ್ಯಕ್ಷ ಬಿ.ಶಿವಪ್ಪ, ಗೌರವ ಅಧ್ಯಕ್ಷ ಸೋಮೇಶ್, ಅಧ್ಯಕ್ಷ ಗೌಡ ಜಯಕುಮಾರ್ ಹಾಗೂ ಕಾರ್ಯದರ್ಶಿ ಕೃಷ್ಣ, ಚನ್ನರಾಯಪಟ್ಟಣದ ಪತ್ರಕರ್ತ ನಾಗೇಂದ್ರ ನಡೆಸಿಕೊಟ್ಟರು.

ಮಂಡ್ಯ ಹಾಲು ಒಕ್ಕೂಟದ ನಿರ್ದೇಶಕ ಡಾಲು ರವಿ ವಿವಿಧ ಸಾಧಕರನ್ನು ಸನ್ಮಾನಿಸಿ ಗೌರವಿಸಿ ಮಾತನಾಡಿ ಗಣೇಶೋತ್ಸವ ನಮ್ಮ ಸಂಸ್ಕೃತಿಯ ಸಂಕೇತವಾಗಿದ್ದು ಸಂತೆಬಾಚಹಳ್ಳಿಯ ಗಣೇಶೋತ್ಸವ ತನ್ನ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ವೈಭವದಿಂದ ರಾಜ್ಯದಲ್ಲಿಯೇ ಹೆಸರು ವಾಸಿಯಾಗಿದೆ. ಕಳೆದ 66 ವರ್ಷಗಳಿಂದ ನಿರಂತರವಾಗಿ ನಡೆಯುತ್ತಿರುವ ಗಣೇಶೋತ್ಸವ ದಲ್ಲಿ ರಾತ್ರಿಯಿಡಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಾವಿರಾರು ಜನರು ತಮ್ಮ ಮಕ್ಕಳು ಹಾಗೂ ಮರಿ ಮಕ್ಕಳೊಂದಿಗೆ ಕುಳಿತು ವೀಕ್ಷಿಸುವುದು ವಿಶೇಷವಾಗಿದೆ. ನಾನು ಹಾಲು ಒಕ್ಕೂಟದ ನಿರ್ದೇಶಕನಾಗಿ ಹೈನುಗಾರಿಕೆಗೆ ಒತ್ತು ನೀಡಿ ಗ್ರಾಮೀಣ ಪ್ರದೇಶದ ಜನರು ಸ್ವಾವಲಂಭಿ ಜೀವನ ನಡೆಸಲು ಒತ್ತಾಸೆ ನೀಡಿ ಕೆಲಸ ಮಾಡುತ್ತಿದ್ದೇನೆ. ಹೈನುಗಾರಿಕೆಯ ಮೂಲಕ ಕ್ಷೀರ ಕ್ರಾಂತಿಯಾಗಿ ರೈತಾಪಿ ವರ್ಗದ ಜನರು ನೆಮ್ಮದಿಯ ಜೀವನ ನಡೆಸಲು ಸಹಕಾರಿಯಾಗಿದೆ ಎಂದು ಡಾಲು ರವಿ ಹೇಳಿದರು.

# ಬೊಮ್ಮಘಟ್ಟ, ತೋರಣಗಲ್ಲು ಸ್ಟೇಷನ್ ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅನ್ನಪೂರ್ಣ ತುಕಾರಾಂ ಭರ್ಜರಿ ಪ್ರಚಾರ

**ಸಂಡೂರು :** ಅಭಿವೃದ್ಧಿ ಕಾರ್ಯಗಳನ್ನು ಮಾಡುವಾಗ ತುಕಾರಾಂ ಅವರು ಯಾವುದೇ ಜಾತಿ, ವರ್ಗದ ತಾರತಮ್ಯ ಮಾಡುತ್ತಿರಲಿಲ್ಲ. ಎಲ್ಲರನ್ನೂ ಸಮಾನವಾಗಿ ನೋಡುತ್ತಿದ್ದರು. ಸರ್ಕಾರದ ಸೌಲಭ್ಯಗಳನ್ನು ಎಲ್ಲರಿಗೂ ಒಂದೇ ರೀತಿ ಸಿಗುವಂತೆ ಪ್ರಯತ್ನಿಸುತಿದ್ದರು ಎಂದು ಕಾಂಗ್ರೆಸ್ ಅಭ್ಯರ್ಥಿ ಅನ್ನಪೂರ್ಣ ತುಕರಾಮ್ ಅಭಿಪ್ರಾಯ ಪಟ್ಟರು.

ಅವರು ಇಂದು ತಾಲೂಕಿನ ಬೊಮ್ಮಘಟ್ಟ ಮತ್ತು ತೋರಣಗಲ್ ಸ್ಟೇಷನ್ ಗ್ರಾಮಗಳಲ್ಲಿ ಮತದಾರರನ್ನು ಉದ್ದೇಶಿಸಿ ಮಾತನಾಡಿ, ಸಂಡೂರು ಉಪ ಚುನಾವಣೆ ಕಾಂಗ್ರೆಸ್ ಅಭ್ಯರ್ಥಿ ಅನ್ನಪೂರ್ಣ ತುಕಾರಾಂ ಅವರು, ಬೊಮ್ಮಘಟ್ಟ, ತೋರಣಗಲ್ಲು ಸ್ಟೇಷನ್ ನಲ್ಲಿ ಪ್ರಚಾರ ನಡೆಸಿ ಮತಯಾಚನೆ ಮಾಡಿ,

ಬೊಮ್ಮಘಟ್ಟದಲ್ಲಿ ನಡೆದ ಒಕ್ಕಲಿಗ ಕುಂಚಿಟಿಗರ ಸಂಘದ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಈ ವೇಳೆ ಒಕ್ಕಲಿಗ ಕುಂಚಿಟಿಗ ಸಮುದಾಯದ ನಾಯಕರು ತಮ್ಮ ಸಂಘದ ಕಾರ್ಯಕ್ಕೆ ನಿವೇಶನ ಕೋರಿ ಮನವಿ ಸಲ್ಲಿಸಿದರು.

ಈಸಂದರ್ಭದಲ್ಲಿಕೆಪಿಸಿಸಿರಾಜ್ಯಉಪಾಧ್ಯಕ್ಷರಾದಮುರುಳೀಧರ್ ಹಾಲಪ್ಪ ಸೇರಿದಂತೆ ವಿವಿಧ ಮುಖಂಡರು ಹಾಜರಿದ್ದರು.



"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State